ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಸನ

ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ

ಶಿಕ್ಷಕ-ಶಿಕ್ಷಣ ಯೋಜನೆಯಡಿಯಲ್ಲಿ

# ಪ್ರಥಮ ಭಾಷೆ ಕನ್ನಡ



## ಎಸ್.ಎಸ್.ಎಲ್.ಸಿ. ನೂತನ ಮಾದರಿ ಪ್ರಶ್ನೆಪತ್ರಿಕೆಗಳು

# 2020-21

# ಮುನ್ನುಡಿ

ಕೋವಿಡ್ 19 ರ ಪ್ರಭಾವದಿಂದ ಘನಸರ್ಕಾರವು ವಿದ್ಯಾರ್ಥಿಗಳಲ್ಲಿ ನಿರಂತರ ಕಲಿಕೆಯನ್ನು ಸಾಧಿಸುವ ಸಲುವಾಗಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ತಂದಿತು. ಸಾರ್ವಜನಿಕ ಶಿಕ್ಷಣ ಇಲಾಖೆಯು ವಿದ್ಯಾಗಮದಂತಹ ಉತ್ತಮವಾದ ಹಾಗೂ ವಿನೂತನವಾದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರ ಮೂಲಕ ವಿದ್ಯಾರ್ಥಿಗಳನ್ನು ಶಿಕ್ಷಕರ ಸಂಪರ್ಕದಲ್ಲಿರಿಸಲು ಸಾಧ್ಯವಾಯಿತು.

2020–21 ನೇ ಸಾಲಿನ ಶೈಕ್ಷಣಿಕ ಸಾಲಿನ ಜೂನ್ ಮಾಹೆಯಲ್ಲಿ ಪ್ರಾರಂಭವಾಗುವ ಬದಲಾಗಿ ಜನವರಿ 2021 ಕ್ಕೆ ಶಾಲಾ ಪ್ರಾರಂಭವನ್ನು ಹಂತಹಂತವಾಗಿ ಮಾಡಬೇಕಾಯಿತು. ಈ ನಡುವೆ ಚಂದನವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಸಂವೇದ ಇ–ತರಗತಿಗಳನ್ನು ವೀಕ್ಷಿಸಲು ಕ್ರಮವಹಿಸಲಾಯಿತು. ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿರುವ ಕಲಿಯುತ ನಲಿಯೋಣ ಆಲಿಸಲು ಪ್ರೋತ್ಸಾಹಿಸಲಾಯಿತು.

ಕಡಿತಗೊಂಡ ಶೈಕ್ಷಣಿಕ ವರ್ಷದ ಹಿನ್ನೆಲೆಯಲ್ಲಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಹತ್ತನೇ ತರಗತಿಯ ಪಠ್ಯಾಂಶವನ್ನು ಕಡಿತಗೊಳಿಸುವುದರೊಂದಿಗೆ ಪ್ರಶ್ನೆಪತ್ರಿಕೆಯ ಕ್ಲಿಷ್ಟತೆಯ ಮಟ್ಟವನ್ನು ಕಡಿಮೆಗೊಳಿಸಿ ಕಲಿಕೆಯನ್ನು ಅನುಕೂಲಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದೆ. ಹಾಗೂ ಜಿಲ್ಲಾ ಹಂತದಲ್ಲಿ ಈ ಸಂಬಂಧ ಶಿಕ್ಷಕರಿಗೆ ಎಲ್ಲಾ ವಿಷಯಗಳಲ್ಲಿಯೂ ವೆಬಿನಾರ್ ಮೂಲಕ ತರಬೇತಿ ನೀಡಲಾಗಿದೆ.

ಉತ್ತಮ ಫಲಿತಾಂಶ ನೀಡುವ ಆಶಯದೊಂದಿಗೆ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪಠ್ಯಕಡಿತದ ಹಿನ್ನೆಲೆಯಲ್ಲಿ ಥೀಮ್ ಬೇಸ್ಡ್ ಮಾದರಿ ಪ್ರಶ್ನೆಪತ್ರಿಕೆಗಳ ಪ್ರಶ್ನಾಕೋಠಿಯನ್ನು ತಯಾರಿಸಿಕೊಡಲಾಗುತ್ತಿದ್ದು ಶಿಕ್ಷಕರು ಇದನ್ನು ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಉತ್ತಮವಾಗಿ ಸಿದ್ಧಗೊಳಿಸುವ ನಿರೀಕ್ಷೆಯೊಂದಿಗೆ ಶುಭ ಹಾರೈಸಲಾಗಿದೆ.

**ಡಿ.ಟಿ. ಪುಟ್ಟರಾಜು**
ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಹಾಸನ

## –:ಸಲಹೆ ಮತ್ತು ಮಾರ್ಗದರ್ಶನ:–

**ಶ್ರೀಮತಿ ಪುಷ್ಪಾ. ಎಸ್.**
**ಉಪನ್ಯಾಸಕರು ಹಾಗೂ ಎಸ್.ಎಸ್.ಎಲ್.ಸಿ. ನೋಡಲ್ ಅಧಿಕಾರಿಗಳು. ಡಯಟ್ ಹಾಸನ**

## –:ಪ್ರಶ್ನೆ ಪತ್ರಿಕೆ ರಚನಾ ತಂಡ:–

**ರಮೇಶ್ ಕಣಕಟ್ಟೆ.**
**ಸ.ಪ.ಪೂ.ಕಾಲೇಜು(ಪ್ರೌಢಶಾಲಾ ವಿಭಾಗ) ಬಾಣಾವರ. ಅರಸೀಕೆರೆ ತಾಲ್ಲೂಕು. 9481117477**

**ಶಾಂತಸಾಗರ ಕಲಕೇರಿ**
**ಸರ್ಕಾರಿ ಪ್ರೌಢಶಾಲೆ, ಯಲಗತವಳ್ಳಿ. ಅರಕಲಗೂಡು ತಾಲ್ಲೂಕು. 9591212061**

**ಸತೀಶ್.ಪಿ.ಕೆ.**
**ಸರ್ಕಾರಿ ಪ್ರೌಢಶಾಲೆ, ನಿಟ್ಟೂರು. ಹಾಸನ ತಾಲ್ಲೂಕು. 9686031369**

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 1

ಸಮಯ: 3 ಗಂಟೆ | **ಪ್ರಥಮ ಭಾಷೆ ಕನ್ನಡ (01 K)** | ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳು

   ಎ) 13 ಬಿ) 10 ಸಿ) 25 ಡಿ) 2

2. ಭೀಮನಂ– ಪದದಲ್ಲಿರುವ ವಿಭಕ್ತಿ

   ಎ) ಪ್ರಥಮ ಬಿ) ದ್ವಿತೀಯ ಸಿ) ಪಂಚಮಿ ಡಿ) ಸಪ್ತಮಿ

3. ಮನ್ವಂತರ– ಪದವು ಈ ಸಂಧಿಗೆ ಉದಾಹರಣೆಯಾಗಿದೆ

   ಎ) ಆಗಮಸಂಧಿ ಬಿ) ಯಣ್‌ಸಂಧಿ ಸಿ) ಸವರ್ಣದೀರ್ಘಸಂಧಿ ಡಿ) ವೃದ್ಧಿಸಂಧಿ

4. ಕಾಗದ– ಈ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

   ಎ) ಹಿಂದೂಸ್ಥಾನಿ ಬಿ) ಉರ್ದು ಸಿ) ಫಾರ್ಸಿ ಡಿ) ಅರಬ್ಬೀ

5. ಬರೆದನು– ಪದದ ವಿಧ್ಯರ್ಥಕ ರೂಪ

   ಎ) ಬರೆಯಲಿ ಬಿ) ಬರೆಯದು ಸಿ) ಬರೆದಾನು ಡಿ) ಬರೆಯನು

6. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು ಹೀಗೆಂದು ಕರೆಯುವರು.

   ಎ) ಸಾಮಾನ್ಯವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಮಿಶ್ರವಾಕ್ಯ ಡಿ) ಭಾವಸೂಚಕವಾಕ್ಯ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ದ್ಯೂತ : ಜೂಜು : : ದೃಷ್ಟಿ : __________
8. ಹಾಲ್ಜೇನು : ಜೋಡುನುಡಿ : : ತುತ್ತತುದಿ : __________
9. ಬರೆದ : ಕೃದಂತನಾಮ : : ಅಂಜಿಕೆ : __________
10. ಕೃತ್ರಿಮ : ಮೋಸ : : ಅನೃತ : __________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?
12. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
13. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
14. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
15. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?
16. ದಿನಪಸುತ ಎಂದು ಯಾರನ್ನು ಕರೆಯುತ್ತಾರೆ?
17. ಚಿಕಾಗೋ ಸರ್ವಧರ್ಮ ಸಮ್ಮೇಳನ ಯಾವಾಗ ನಡೆಯಿತು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
19. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
20. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
21. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

22. ಹಕ್ಕಿಯ ಹಾರಾಟವನ್ನು ಕವಿ ಬೇಂದ್ರೆಯವರು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?
24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?
25. ಪುಟ್ಟಪೋರಿಯ ಯಜಮಾನನ ಮನೆಯಲ್ಲಿ ಯಾವ ರೀತಿಯ ಸಂಭ್ರಮವಿದೆ?
26. ಭಗತ್‌ಸಿಂಗ್‌ನ ಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿಯಿತು?
27. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ಬರೆಯಿರಿ.

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಪು.ತಿ.ನ
29. ದ.ರಾ.ಬೇಂದ್ರೆ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ತಾಳಿದವನು ಬಾಳಿಯಾನು
* ಮನಸ್ಸಿದ್ದರೆ ಮಾರ್ಗ

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
34. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"
35. "ಹಸಿಯದ ಬೇಹಾರಿಯೇ ಇಲ್ಲ"
36. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"
37. "ಬಾಯ್ದಂಬುಲಕೆ ಕೈಯಾನುವರೆ"
38. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಹಸುರಾಗಸ ______
______
______
______ ಬಿಸಿಲೂ !

**ಅಥವಾ**

ಹೊಸ ಹೂವಿನ ______
______
______
______ಯುಸಿರೂ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4=4**

40. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।
ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಿಡಿವರೆಮ್ಮನೆನಲು ॥
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?

ಅಥವಾ

ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಸತ್ಯೇಂದ್ರನಾಥ ಬೋಸ್‌ರವರು ಕಲ್ಕತ್ತಾದಲ್ಲಿ 1904ರಲ್ಲಿ ಜನಿಸಿದರು. ಇವರ ತಂದೆ ಸುರೇಂದ್ರನಾಥ ಬೋಸರು ರೇಲ್ವೆ ಉದ್ಯೋಗಿಯಾಗಿದ್ದರು. ತಾಯಿಯ ಹೆಸರು ಅಮೋದಿನಿ ದೇವಿ. ಕಲ್ಕತಾದಲ್ಲಿನ ಕಾಲೇಜು ವಿದ್ಯಾಭ್ಯಾಸದಲ್ಲಿ ಜಗದೀಶ ಚಂದ್ರ ಬೋಸರ ಶಿಷ್ಯರಾಗಿದ್ದರು. ಎಂ.ಎಸ್.ಸಿ. ಪದವಿಗಳಿಸಿ ಕಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾದರು. ಅನಂತರ ಢಾಕಾ ವಿಶ್ವವಿದ್ಯಾನಿಲಯದಲ್ಲಿ ರೀಡರ್ ಆದರು. ಢಾಕಾ ವಿಶ್ವವಿದ್ಯಾಲಯ ಸತ್ಯೇಂದ್ರನಾಥರಿಗೆ ಯೂರೋಪ್ ಪ್ರವಾಸದ ಏರ್ಪಾಡು ಮಾಡಿಕೊಟ್ಟಿತು. ಮೇಡಂ ಕ್ಯೂರಿಯವರ ಪ್ರಯೋಗಶಾಲೆಯಲ್ಲಿ ಸಂಶೋಧನೆ ನಡೆಸಿದರು. ಬರ್ಲಿನ್ ಹೋಗಿ ಆಲ್ಬರ್ಟ್ ಐನ್‌ಸ್ಟೈನ್‌ರೊಂದಿಗೆ ಕಾರ್ಯ ನಿರ್ವಹಿಸಿದರು. ಸತ್ಯೇಂದ್ರನಾಥರು ಮಿತ್ರರೊಂದಿಗೆ ಸೇರಿ ಅನಿಲಗಳ ಒತ್ತಡ, ಘನ ಅಳತೆ, ರೇಖಾಗಣಿತ ಪ್ರಮೇಯಗಳು ಕ್ವಾಂಟಂ ಸಂಖ್ಯಾಶಾಸ್ತ್ರ, ಅಣು, ಅನಿಲಗಳ ಬಗ್ಗೆ ಸಂಶೋಧನೆ ನಡೆಸಿದರು. ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರಗಳಲ್ಲಿ ಸಹ ಆಸಕ್ತಿ ಹೊಂದಿದ್ದರು. 1950ರಲ್ಲಿ ಸತ್ಯೇಂದ್ರನಾಥರು ರಾಜ್ಯಸಭಾ ಸದಸ್ಯರಾದರು. 1964ರಲ್ಲಿ ದೆಹಲಿ ವಿಶ್ವವಿದ್ಯಾನಿಲಯ ಡಿ.ಎಸ್.ಸಿ. ಪದವಿ ನೀಡಿತು. ಅನೇಕ ಭಾಷೆಗಳನ್ನು ತಿಳಿದ ಸತ್ಯೇಂದ್ರನಾಥರು ಐನ್‌ಸ್ಟೀನ್‌ನ ಬಗ್ಗೆ ಗ್ರಂಥ ರಚಿಸಿದರು. 1974ರಲ್ಲಿ ಶ್ರೀ ಸತ್ಯೇಂದ್ರನಾಥ ಬೋಸರು ದಿವಂಗತರಾದರು.

**ಪ್ರಶ್ನೆಗಳು:**43 ಅ) ಸತ್ಯೇಂದ್ರನಾಥರ ಸಂಶೋಧನೆಗಳಾವುವು? ಅವರ ಆಸಕ್ತಿಯ ವಿಷಯಗಳಾವುವು?

43. ಆ) ಸತ್ಯೇಂದ್ರನಾಥರಿಗೆ ಢಾಕಾ ಪ್ರವಾಸದಿಂದ ಆದ ಪ್ರಯೋಜನಗಳೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸುಜನಾ ಎಂದು ಭಾವಿಸಿಕೊಂಡು ಬೆಂಗಳೂರಿನ ವಸ್ತುಸಂಗ್ರಹಾಲಯದ ವ್ಯವಸ್ಥಾಪಕರಿಗೆ ಪ್ರವೇಶಾತಿಗೆ ಅನುಮತಿ ಕೋರಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ನವೀನ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಬೆಂಗಳೂರಿನ ಶಾಂತಿನಗರದಲ್ಲಿರುವ ನಿಮ್ಮ ತಂದೆ 'ಶಿವಪ್ಪ'ನವರಿಗೆ ಒಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಸ್ವಚ್ಛ ಭಾರತ ಅಭಿಯಾನ

**ಅಥವಾ**

* ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 2

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಈ ಕೆಳಗಿನವುಗಳಲ್ಲಿ ಅನ್ವರ್ಥಕ ನಾಮಪದ

   ಎ) ಅರ್ಜುನ ಬಿ) ಗುಡ್ಡ ಸಿ) ವಿದ್ವಾಂಸ ಡಿ) ಅವನು

2. ಉತ್ತಮಪುರುಷ ಸರ್ವನಾಮಕ್ಕೆ ಉದಾಹರಣೆ

   ಎ) ನಾನು ಬಿ) ಅವನು ಸಿ) ನೀನು ಡಿ) ತಾನು

3. ಕರ್ಮಧಾರಯ ಸಮಾಸಕ್ಕೆ ಉದಾಹರಣೆ

   ಎ) ಸೊಲ್ಗೇಳಿ ಬಿ) ಅಂತಕಾತ್ಮಜ ಸಿ) ಸೂರ್ಯಚಂದ್ರರು ಡಿ) ದಿವ್ಯಶರಾಳಿ

4. ‘ಕಳುವ್ಯಾರೆ’ ಪದದ ಗ್ರಾಂಥಿಕ ರೂಪ

   ಎ) ಕಳುಹಿಸುವರು ಬಿ) ಕಳುಹಿಸಿದ್ದಾರೆ ಸಿ) ಕಳುಹಿಸುತ್ತೀರಾ ಡಿ) ಕಳಿಸಿ

5. ಸಾಮಾನ್ಯಾವ್ಯಯಕ್ಕೆ ಉದಾಹರಣೆಯಾದ ಪದವಿದು.

   ಎ) ಕರಕರ ಬಿ) ಅಹುದು ಸಿ) ಆದ್ದರಿಂದ ಡಿ) ತಟ್ಟನೆ

6. ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುತ್ತದೆ.

   ಎ) ಅಲ್ಪವಿರಾಮ ಬಿ) ಅರ್ಧವಿರಾಮ ಸಿ) ಪೂರ್ಣವಿರಾಮ ಡಿ) ಆವರಣ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ತೃತೀಯಾ ವಿಭಕ್ತಿ : ಕರಣಾರ್ಥ : : ಷಷ್ಠಿ ವಿಭಕ್ತಿ : ____________
8. ಮಳೆಗಾಲ : ಆದೇಶಸಂಧಿ : : ವಾಗ್ದೇವಿ : ____________
9. ತಂಬಾಕು : ಪೋರ್ಚುಗೀಸ್ : : ಅಬಕಾರಿ : ____________
10. ಕನ್ನಡಿಗ : ತದ್ಧಿತಾಂತನಾಮ : : ಜಾಣತನ : ____________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
12. ಮುದುಕಿಯು ರಾಹಿಲನನ್ನು ಎಲ್ಲಿ ಬಚ್ಚಿಟ್ಟಳು?
13. ಹುಲಿಯು ಏನನ್ನು ನೋಡಿ ಪರಮಾನಂದ ಹೊಂದಿತು?
14. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
15. ಕವಿ ಜಿ.ಎಸ್ ಶಿವರುದ್ರಪ್ಪನವರು ಇಂದು ನದೀಜಲಗಳು ಏನಾಗಿವೆ ಎಂದು ಹೇಳುತ್ತಾರೆ?
16. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
17. ಉಪ್ಪಿನ ಕುರಿತಾದ ಒಗಟು ಬರೆಯಿರಿ.

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
19. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
21. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?

22. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?

23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

25. ವಸಂತನ ಬಗ್ಗೆ ಪುಟ್ಟಿಯ ಪ್ರಶ್ನೆಗಳೇನು?

26. ಜನರಲ್ ಡಯರ್‌ನ ಪೈಶಾಚಿಕ ಕೃತ್ಯವನ್ನು ಕುರಿತು ವಿವರಿಸಿ.

27. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಡಿ.ಎಸ್.ಜಯಪ್ಪಗೌಡ

29. ಜಿ.ಎಸ್.ಶಿವರುದ್ರಪ್ಪ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಶಕ್ತಿಗಿಂತ ಯುಕ್ತಿ ಮೇಲು
* ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆವುದೇ?"

34. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ"

35. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟ್ಟುವ ಬಗೆ"

36. "ಮಂಗಳ ಲೋಕದ ಅಂಗಳಕೇರಿ"

37. "ಮೇಣಾಯ್ತು ಕೌರವಂಗವನಿತಳಂ"

38. "ಅರಸುಗಳ ವಾಜಿಯಂ ಬಿಡು"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಕೊಡಲಿ ಕೋರೆ______ ಸಿಕ್ಕದ್ದು ______
______ ______
______ **ಅಥವಾ** ______
______ ನಾನೆಷ್ಟಾ ______ ಜನಕಾ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. **1 x 4=4**

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ!

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

**ಅಥವಾ**

ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮಶ್ರದ್ಧೆಯೇ? ಸಮರ್ಥನೆಯೊಂದಿಗೆ ವಿವರಿಸಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಶಿಕ್ಷಣ ಜೀವನಕ್ಕಾಗಿ, ಜೀವನೋಪಾಯಕ್ಕಾಗಿ ಅಲ್ಲ. ಶಿಕ್ಷಣದ ಗುರಿ ಶೀಲ ಸಂವರ್ಧನೆ ಆಗಬೇಕು. ಜೀವನದಲ್ಲಿ ವಿದ್ಯಾಭ್ಯಾಸದ ಅವಧಿ ಅತ್ಯಮೂಲ್ಯವಾದುದು. ಆ ದಿನಗಳಲ್ಲಿ ನಿಜವಾದ ವಿದ್ಯಾರ್ಥಿಯಾಗಿರಬೇಕೇ ಹೊರತು ವಿಷಯಾರ್ಥಿಯಾಗಬಾರದು. ಉನ್ನತ ಭಾವನೆಗಳನ್ನು, ಉತ್ತಮ ವಚನಗಳನ್ನು, ಒಳ್ಳೆಯ ಅಭ್ಯಾಸಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕು, ವಿದ್ಯಾರ್ಥಿಗಳು ತಂದೆ-ತಾಯಿಯರ ಮೇಲೆ ಪ್ರೀತಿ ಗೌರವ ಹೊಂದಿರಬೇಕು. ನಮ್ಮ ಸ್ವಂತ ಸುಖ ವಿಲಾಸಗಳಿಗೆ ಅಂಟಿಕೊಂಡು ಮಾತಾಪಿತರನ್ನು ಉಪೇಕ್ಷಿಸುವುದು ಸರ್ವಥಾ ಸರಿಯಲ್ಲ. ಅವರಿಂದಲೇ ನಮಗೆ ಈ ದೇಹ ಬಂದಿದೆ. ಅವರ ರಕ್ತದಿಂದಲೇ ನಾವು ಬೆಳೆದಿದ್ದೇವೆ. ಅವರ ಶ್ರಮ, ಧನ ಎಲ್ಲವೂ ನಮ್ಮ ಅಭ್ಯುದಯಕ್ಕೆ ಉಪಯೋಗವಾಗಿದೆ. ಅವರಿಗೆ ಕೃತಜ್ಞರಾಗಿರಬೇಕಾದುದು ನಮ್ಮ ಧರ್ಮ. ವಿದ್ಯಾಭ್ಯಾಸವು ವಾಕ್‌ಶುದ್ಧಿ, ಆಚಾರ ಶುದ್ಧಿ, ವಿಚಾರ ಶುದ್ಧಿ, ಚಾರಿತ್ರ್ಯ ಶುದ್ಧಿ, ಅಂತಃಶುದ್ಧಿ ಈ ನಾಲ್ಕು ಅಂಶಗಳನ್ನು ಮುಂದೆ ಬೆಳೆಸಿಕೊಳ್ಳಬೇಕು.

**ಪ್ರಶ್ನೆಗಳು :**

43) ಅ. ತಂದೆ-ತಾಯಿಯರಿಗೆ ಏಕೆ ಕೃತಜ್ಞರಾಗಿರಬೇಕು?

43) ಆ. ಶಿಕ್ಷಣವನ್ನು ಪಡೆಯಬೇಕಾದ ಅಗತ್ಯವೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನೀವು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ಮೋಹನ/ಮಣಿ ಎಂದು ಭಾವಿಸಿಕೊಂಡು ಶಿವಮೊಗ್ಗದಲ್ಲಿರುವ ನಿಮ್ಮ ತಾಯಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿ ಕುರಿತು ಪತ್ರ ಬರೆಯಿರಿ.

**ಅಥವಾ**

ಮೊರಾರ್ಜಿದೇಸಾಯಿ ವಸತಿ ಶಾಲೆಯ ಸ್ನೇಹಾ/ಸಂಕೇತ ಎಂದು ತಿಳಿದು ನಿಮ್ಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಅತಿವೃಷ್ಟಿ ಮತ್ತು ಅನಾವೃಷ್ಟಿ

**ಅಥವಾ**

* ಕಂಪ್ಯೂಟರ್ ಶಿಕ್ಷಣದ ಅಗತ್ಯತೆ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 3

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಕ್ರಿಯಾಪದದ ಮೂಲರೂಪ
   ಎ) ಕ್ರಿಯಾಪ್ರಕೃತಿ ಬಿ) ಕ್ರಿಯಾಸ್ವರೂಪ ಸಿ) ಕ್ರಿಯೆ ಡಿ) ಪ್ರತ್ಯಯ
2. 'ಈಗೀಗ' ಪದದ ವ್ಯಾಕರಣ ವಿಶೇಷ
   ಎ) ನುಡಿಗಟ್ಟು ಬಿ) ಜೋಡುನುಡಿ ಸಿ) ದ್ವಿರುಕ್ತಿ ಡಿ) ಪಡೆನುಡಿ
3. ಈ ಕೆಳಗಿನವುಗಳಲ್ಲಿ ಕೃದಂತ ಭಾವನಾಮಕ್ಕೆ ಉದಾಹರಣೆ
   ಎ) ನಡೆಯಲು ಬಿ) ನಡವಳಿಕೆ ಸಿ) ನಡೆಯುವ ಡಿ) ಚೆಲುವಿಕೆ
4. ಪಾರಿಭಾಷಿಕ ಪದಗಳನ್ನು ಬಳಸುವಾಗ ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸುತ್ತಾರೆ.
   ಎ) ಉದ್ಧರಣ ಬಿ) ಅರ್ಧವಿರಾಮ ಸಿ) ವಾಕ್ಯವೇಷ್ಟನ ಡಿ) ಆವರಣ
5. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು
   ಎ) ಸಾಮಾನ್ಯವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಮಿಶ್ರವಾಕ್ಯ ಡಿ) ಭಾವಸೂಚಕವಾಕ್ಯ
6. ನೀರದ– ಪದದ ಅರ್ಥ
   ಎ) ಮೋಡ ಬಿ) ಆಕಾಶ ಸಿ) ಸಮುದ್ರ ಡಿ) ಜಲಧಿ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಅನುನಾಸಿಕಗಳು : 05 : : ಅವರ್ಗೀಯ ವ್ಯಂಜನಗಳು : ___________
8. ಹೆದ್ದಾರಿ : ಕರ್ಮಧಾರಯ ಸಮಾಸ : : ಅರಮನೆ : ___________
9. ಪಟ್ಟಣ : ಪತ್ತನ : : ವಂಶ : ___________
10. ಆಹಾ : ಭಾವಸೂಚಕಾವ್ಯಯ : : ಅದುವೇ : ___________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ಮುದುಕಿಯ ಗಂಡನು ಎಲ್ಲಿಗೆ ಹೋಗಿದ್ದನು?
12. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು?
13. ವ್ಯಾಪಾರಿಗಳು ಅರ್ಧರಾತ್ರಿಯಲ್ಲಿ ಎಲ್ಲಿ ಬೀಡುಬಿಟ್ಟರು?
14. ಪ್ರಜಾಪ್ರತಿನಿಧಿ ಸಭೆಯಲ್ಲಿದ್ದ ಸದಸ್ಯರ ಸಂಖ್ಯೆ ಎಷ್ಟು?
15. ಕವಿ ಜಿ.ಎಸ್ ಶಿವರುದ್ರಪ್ಪನವರು ನಾವು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ?
16. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
17. ಬೀಸುವ ಕಲ್ಲನ್ನು ಕುರಿತಾದ ಒಗಟು ಬರೆಯಿರಿ.

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
19. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
20. ಮಂಚಮ್ಮ ದೇವಿಯು ತನಗೆ ಗುಡಿ ಕಟ್ಟುವುದು ಬೇಡವೆಂದು ಹೇಳಲು ಕಾರಣವೇನು?

21. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳಾವುವು?
22. ಹಲಗಲಿಗೆ ದಂಡು ಬರಲು ಕಾರಣವೇನು?
23. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ?
24. ಶೂದ್ರರು ಮತ್ತು ಶೂದ್ರತ್ವದ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
25. ವಸಂತ ಮುಖ ತೋರಲಿಲ್ಲ- ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಭಗತ್‌ಸಿಂಗ್ ಊಟ ಮಾಡದೆ ಉಪವಾಸವಿದ್ದುದಕ್ಕೆ ಕಾರಣವೇನು?
27. ಉತ್ತರಾಣಿ ಮತ್ತು ಗರಿಕೆ ಕೊಡುವ ತೊಂದರೆಯನ್ನು ಒಗಟು ಹೇಗೆ ವಿವರಿಸುತ್ತದೆ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ದೇವನೂರ ಮಹಾದೇವ
29. ಕುವೆಂಪು

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ
* ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ?"
34. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"
35. "ಪೊನ್ನನೆಲ್ಲಮಂ ನೀನೆ ಕೊಂಡೆ"
36. "ಮುಂಗಾರಿನ ಮಳೆಯಾಗೋಣ."
37. "ಜೀವ ಸತ್ತು ಹೋಗುವುದು ಗೊತ್ತ"
38. "ಅರಸುಗಳ ವಾಜಿಯಂ ಬಿಡು"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಕೊರಳಸೆರೆ ಹಿಗ್ಗಿದವು ದೃಗುಜಲ ______________________ ______________________ ______________________

**ಅಥವಾ**

ಮಾರಿಗೌತಣವಾಯ್ತು ನಾಳಿನ ______________________ ______________________ ______________________ ______________________

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

ವೀರರ್ಶೈವರ ನೋಯಿಸೆನು ರಾಜೀವಸಖನಾಣೆ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. **1 x 4=4**

ನೆಲಕಿಜಿವೆನೆಂದು ಬಗೆದಿರೆ।

ಚಲಕಿಜೆವೆಂ ಪಾಂಡುಸುತರೊಳೀನೆಲನಿದು ಪಾ॥

ೞ್ನೆಲನೆನಗೆ ದಿನಪಸುತನಂ।

ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆಪೆನೇ॥

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

42. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

ಅಥವಾ

ಕಾಲಪಕ್ಷಿಯ ಹೊಡತಕ್ಕೆ ಮಾನವ ಪ್ರಪಂಚದಲ್ಲಾಗುವ ವೈಚಿತ್ರ್ಯಗಳನ್ನು ದ.ರಾ.ಬೇಂದ್ರೆ ಹೇಗೆ ವರ್ಣಿಸಿದ್ದಾರೆ?

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಪ್ರತಿವರ್ಷ ಜೂನ್ 21ನ್ನು ವಿಶ್ವ ಯೋಗದಿನವನ್ನಾಗಿ ಆಚರಿಸಲಾಗುತ್ತದೆ. ಹೀಗೆ ವಿಶ್ವದೆಲ್ಲೆಡೆ ಮಾನ್ಯತೆ ಪಡೆದಿರುವ ಯೋಗವು ಈಗ ಉದ್ಯೋಗದ ಹೆಬ್ಬಾಗಿಲನ್ನೇ ತೆರೆದಿದೆ. ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಯೋಗ ಶಿಕ್ಷಣ ಕೋರ್ಸ್‌ಗಳಿದ್ದರೆ, ಕೇಂದ್ರ ಸರ್ಕಾರ ಮತ್ತು ಬಹುತೇಕ ರಾಜ್ಯ ಸರ್ಕಾರಗಳು ಪ್ರಾಥಮಿಕ ಶಾಲೆ ಹಂತದಿಂದಲೇ ಯೋಗವನ್ನು ಕಡ್ಡಾಯಗೊಳಿಸಿವೆ. ಯೋಗದಿಂದ ಅನೇಕ ಲಾಭಗಳಿವೆ. ಯೋಗ ಶಿಕ್ಷಣವು ಸ್ವಯಂ ಶಿಸ್ತು, ಸಂಯಮ, ಏಕಾಗ್ರತೆ, ಉನ್ನತಮಟ್ಟದ ಚಿಂತನಾ ಸಾಮರ್ಥ್ಯವನ್ನು ಪಡೆಯಲು ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಹೀಗಾಗಿಯೇ ಯೋಗ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ಉದ್ಯೋಗ, ಭವಿಷ್ಯ ಕಟ್ಟಿಕೊಳ್ಳಲು ಸಾಧ್ಯವಾಗುವ ಸನ್ನಿವೇಶ ಈಗ ನಿರ್ಮಾಣವಾಗಿದೆ. ಉತ್ತಮ ಆರೋಗ್ಯ, ಮಾನಸಿಕ ಸ್ಥಿರತೆ, ಭಾವನೆಗಳ ನಿಯಂತ್ರಣ, ನೈತಿಕ ಮೌಲ್ಯಗಳು, ಉನ್ನತ ಮಟ್ಟದ ಪ್ರಜ್ಞೆ ಬೆಳೆಸಿಕೊಳ್ಳಲು ಯೋಗ ನೆರವಾಗುತ್ತದೆ.

**ಪ್ರಶ್ನೆಗಳು:**43 ಅ) ಯೋಗದಿಂದ ಆಗುವ ಪ್ರಮುಖ ಲಾಭಗಳಾವುವು?

43. ಆ) ಇಂದಿನ ದಿನಗಳಲ್ಲಿ ಯೋಗ ಶಿಕ್ಷಣಕ್ಕೆ ದೊರೆತಿರುವ ಮಾನ್ಯತೆಯ ಬಗ್ಗೆ ಬರೆಯಿರಿ.

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ತುಮಕೂರಿನ ಬಸವೇಶ್ವರ ಪ್ರೌಢಶಾಲೆಯ ಶ್ರೇಯಸ್/ಯಶಸ್ವಿನಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ರಾಮನಗರದ ಸರ್ಕಾರಿ ಪ್ರೌಢಶಾಲೆಯ ಸಂಸ್ಕೃತಿ/ಸಂಜಯ್ ಎಂದು ಭಾವಿಸಿಕೊಂಡು ಮಂಡ್ಯದಲ್ಲಿರುವ ನಿಮ್ಮ ಸಹೋದರನಿಗೆ ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವದ ಕುರಿತು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಲಲಿತ ಕಲೆಗಳು

**ಅಥವಾ**

* ತ್ಯಾಜ್ಯವಸ್ತುಗಳ ನಿರ್ವಹಣೆ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 4

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಷಷ್ಠೀ ವಿಭಕ್ತಿಯ ಕಾರಕಾರ್ಥ

   ಎ) ಸಂಪ್ರದಾನ ಬಿ) ಕರಣಾರ್ಥ ಸಿ) ಸಂಬಂಧ ಡಿ) ಕರ್ಮಾರ್ಥ

2. 'ಅಜಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

   ಎ) ಜಶ್ತ್ವಸಂಧಿ ಬಿ) ಶ್ಚುತ್ವಸಂಧಿ ಸಿ) ಆದೇಶಸಂಧಿ ಡಿ) ವೃದ್ಧಿಸಂಧಿ

3. 'ಅನಾನಸು' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

   ಎ) ಉರ್ದು ಬಿ) ಪೋರ್ಚುಗೀಸ್ ಸಿ) ಪರ್ಷಿಯನ್ ಡಿ) ಹಿಂದೂಸ್ಥಾನಿ

4. 'ಮೊತ್ತಮೊದಲು' ಪದದ ವ್ಯಾಕರಣ ವಿಶೇಷ

   ಎ) ಅನುಕರಣಾವ್ಯಯ ಬಿ) ಜೋಡುನುಡಿ ಡಿ) ದ್ವಿರುಕ್ತಿ ಡಿ) ಅವ್ಯಯ

5. ಕೆಳಗಿನವುಗಳಲ್ಲಿ ನಿಷೇಧ ಕೃದಂತಕ್ಕೆ ಈ ಪದವು ಉದಾಹರಣೆಯಾಗಿದೆ.

   ಎ) ಬರೆದರು ಬಿ) ಬರೆದ ಸಿ) ಬರೆಯುವ ಡಿ) ಬರೆಯದ

6. ಕೆಳಗಿನವುಗಳಲ್ಲಿ ಆತ್ಮಾರ್ಥಕ ಸರ್ವನಾಮ ಪದ

   ಎ) ನಾನು ಬಿ) ನೀನು ಸಿ) ಅವನು ಡಿ) ತಾನು

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಮೂಡಣ : ದಿಗ್ವಾಚಕ : : ಹಲವು : __________
8. ಮ್ಯಾಗ : ಮೇಲೆ : : ಹೀಂಗ : __________
9. ಸುಸಂಗತ : ಯೋಗ್ಯವಾದ : : ಹಂಬಲ : __________
10. ಕಪ್ಪು : ತದ್ಧಿತಾಂತ ಭಾವನಾಮ : : ಚಂದ್ರನಂತೆ : __________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ದುಷ್ಟಬುದ್ಧಿಯು ಒದಗಿಸಿದ ಸಾಕ್ಷಿ ಯಾವುದು?
12. ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು?
13. ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಿದವರು ಯಾರು?
14. ಶ್ರೀರಾಮನ ತಂದೆಯ ಹೆಸರೇನು?
15. ಕವಿ ಜಿ.ಎಸ್ ಶಿವರುದ್ರಪ್ಪನವರು ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕೆಂದು ಹೇಳಿದ್ದಾರೆ?
16. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
17. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
19. ನೆಹರೂ ಅವರು ಸರ್ ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
20. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?
21. ವಚನಕಾರರ ದೃಷ್ಟಿಯಲ್ಲಿ ದೇವರು ಎಂದರೆ ಯಾರು? ಹೇಗೆ? ವಿವರಿಸಿ.
22. ಹಕ್ಕಿಯು ಯಾವ ಮೇರೆ ಮೀರಿ, ನೀರನು ಹೀರಿದೆ?

23. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?
24. ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ. ಹೇಗೆ?
25. ಪುಟ್ಟ ಪೋರಿಯ ಮನೆಯ ಪರಿಸ್ಥಿತಿ ಹೇಗಿದೆ?
26. ಭಗತ್‌ಸಿಂಗ್ ವೀರಯೋಧನಾಗಿ ಅಮರನಾದುದು ಹೇಗೆ? ತಿಳಿಸಿ.
27. ಬೀಸುವ ಕಲ್ಲನ್ನು ಕುರಿತ ಒಗಟನ್ನು ವಿವರಿಸಿ.

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಎ.ಎನ್.ಮೂರ್ತಿರಾವ್
29. ಕುವೆಂಪು

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಕೊರಳಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಮಾರಿಗೌತಣವಾಯ್ತು ನಾಳಿನ ಭಾರತವು

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಶಕ್ತಿಗಿಂತ ಯುಕ್ತಿ ಮೇಲು
* ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"
34. "ರೂಪಕೂ ನಾಮ ಮಿಗಿಲಾತ್ಮ ಸುರಭಿಯದು"
35. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ"
36. "ಹೊಸ ಭರವಸೆಗಳ ಕಟ್ಟೋಣ."
37. "ಹೊಸಗಾಲದ ಹಸುಮಕ್ಕಳ ಹರಸಿ"
38. "ಮಾರಿಗೌತಣವಾಯ್ತು ನಾಳಿನ ಭಾರತವು."

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ನೆಲಕಿಱು ________________ ________________ ________________ ________________ಪುದುವಾಟ್ಟಿಪೆನೇ

**ಅಥವಾ**

ಪುಟ್ಟಿದ ________________ ________________ ________________ ________________ಫಲಮನೆ ಮೆಱೆವಂ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4=4**

40. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ ।
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ ।
ಪೊತ್ತುಮಾರೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ॥
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ ।
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು ।

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 x 4=8**

41. ವೃಕ್ಷಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾದ ಬಗೆಯನ್ನು ತಿಳಿಸಿ.

42. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು?

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4=(2+2)**

43. 1924ರಲ್ಲಿ ಬೆಳಗಾವಿಗೆ ಮಹಾತ್ಮಾ ಗಾಂಧೀಜಿಯವರು ಆಗಮಿಸಿದ್ದರು. ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನ ನಡೆಯಿತು. ದೇಶೀಯ ಭಾಷೆಗಳನ್ನು ಆಧರಿಸಿ ಪ್ರಾಂತ್ಯಗಳ ವಿಂಗಡಣೆ ಆಗಬೇಕು ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿತ್ತು. ಅಂದು ಎಲ್ಲರೂ ಮಹಾತ್ಮಾ ಗಾಂಧಿಯವರಿಗೆ ಈ ಬಗ್ಗೆ ಮನವಿ ಸಲ್ಲಿಸಿದರು. ಆಗ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರವ್ಯಾಪಿ ಆಂದೋಲನ ರೂಪಿಸುತ್ತಿದ್ದ ಕಾಂಗ್ರೆಸ್ ನಾಯಕರಲ್ಲಿಯೂ ಇದರ ಬಗ್ಗೆ ಒಮ್ಮತ ಮೂಡಿತ್ತು. ಆ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೂ ವಿಶೇಷ ಚಾಲನೆ ದೊರೆಯಿತು. 25/12/1924ರಂದು ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಸಭೆ'ಯ ಮೊದಲ ಕಾರ್ಯಕ್ರಮ ನಡೆಯಿತು. ಅಂದು ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಮೊದಲಬಾರಿಗೆ ಹಾಡಲಾಯಿತು. ಈ ಸಭೆಯ ಪರಿಣಾಮವಾಗಿ ಮದ್ರಾಸ್ ಮತ್ತು ಮುಂಬೈ ವಿಧಾನಸಭೆಗಳಲ್ಲೂ ಕರ್ನಾಟಕ ಏಕೀಕರಣದ ವಿಷಯ ಪ್ರಸ್ತಾಪಿತಗೊಂಡಿತು.

**ಪ್ರಶ್ನೆಗಳು :**

ಅ) ಕರ್ನಾಟಕ ಸಭಾದ ಮೊದಲ ಕಾರ್ಯಕ್ರಮದ ವಿಶೇಷತೆಗಳೇನು?

ಆ) ಬೆಳಗಾವಿ ಮಹಾಧಿವೇಶನದಲ್ಲಿ ನಡೆದ ಕಾರ್ಯಕ್ರಮಗಳೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1x 5 = 5**

44. ನಿಮ್ಮನ್ನು ಮಂಗಳೂರಿನ ವಿವೇಕಾನಂದ ಪ್ರೌಢಶಾಲೆ ಅಶ್ವಿನ್/ಅಶ್ವಿನಿ ಎಂದು ಭಾವಿಸಿಕೊಂಡು ಕೊರೋನಾ ಮಹಾಮಾರಿಯ ಬಗ್ಗೆ ಜಾಗೃತಿ ಮೂಡಿಸುವ ವಿವರಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವಂತೆ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಹಾಸನದ ವಿಜಯಾ ಪ್ರೌಢಶಾಲೆಯ ಚೈತ್ರಾ/ ಚೇತನ್ ಎಂದು ಭಾವಿಸಿಕೊಂಡು ಚಿಕ್ಕಮಗಳೂರಿನಲ್ಲಿರುವ ನಿಮ್ಮ ತಾಯಿಗೆ ನಿಮ್ಮ ಶಾಲೆಯಲ್ಲಿ ನಡೆಯುವ ತಾಯಂದಿರ ಸಭೆಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ:** **1x5=5**

45. * ಮಹಿಳಾ ಸಬಲೀಕರಣ

**ಅಥವಾ**

* ರಾಷ್ಟ್ರೀಯ ಹಬ್ಬಗಳ ಆಚರಣೆಯ ಮಹತ್ವ.

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21
## ಮಾದರಿ ಪ್ರಶ್ನೆಪತ್ರಿಕೆ 5

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ವರ್ಗದ ಪ್ರಥಮ ಮತ್ತು ತೃತೀಯಾಕ್ಷರಗಳನ್ನು ಹೀಗೆಂದು ಕರೆಯುವರು.
   ಎ) ದೀರ್ಘಸ್ವರ ಬಿ) ಅಲ್ಪಪ್ರಾಣ ಸಿ) ಮಹಾಪ್ರಾಣ ಡಿ) ಅನುನಾಸಿಕ
2. ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪದ
   ಎ) ವ್ಯಾಪಾರಿ ಬಿ) ಶಿಕ್ಷಕ ಸಿ) ಕುರುಡ ಡಿ) ಬೆಟ್ಟ
3. ಮಧ್ಯಮಪುರುಷ ಸರ್ವನಾಮಕ್ಕೆ ಉದಾಹರಣೆ
   ಎ) ನಾವು ಬಿ) ಅವರು ಸಿ) ನೀವು ಡಿ) ತಾವು
4. 'ಇಸವಾಸ' ಇದರ ಗ್ರಾಂಥಿಕ ರೂಪ
   ಎ) ಇಶವಾಶ ಬಿ) ವಿಶ್ವಾಸ ಸಿ) ವಿನಮ್ರತೆ ಡಿ) ವಿಶ್ವಾಸಾರ್ಹ
5. ಇವುಗಳಲ್ಲಿ ಅವಧಾರಣಾರ್ಥಕಾವ್ಯಯಕ್ಕೆ ಉದಾಹರಣೆ
   ಎ) ಸುಮ್ಮನೆ ಬಿ) ಭಳಿರೇ ಸಿ) ಉಂಟು ಡಿ) ಅದುವೇ
6. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.
   ಎ) ಅಲ್ಪವಿರಾಮ ಬಿ) ಪ್ರಶ್ನಾರ್ಥಕ ಸಿ) ಉದ್ಧರಣ ಡಿ) ವಾಕ್ಯವೇಷ್ಠನ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಬರೆಯಲಿ : ವಿಧ್ಯರ್ಥಕ : : ಬರೆದಾನು : ______
8. ದಿನಪಸುತ : ಬಹುವ್ರೀಹಿ ಸಮಾಸ : : ಪಾರ್ಥಭೀಮರು : ______
9. ಯುದ್ಧ : ಜುದ್ಧ : : ಪ್ರಸಾದ : ______
10. ಬಳೆಗಾರ : ತದ್ಧಿತಾಂತನಾಮ : : ಮಾಡಿದ : ______

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ವ್ಯಾಪಾರಿಗಳು ಹೊನ್ನನ್ನು ಎಲ್ಲಿ ಅಡಗಿಸಿಟ್ಟರು?
12. ಭಗವದ್ಗೀತೆಯನ್ನು ರಚಿಸಿದವರು ಯಾರು?
13. 'ಶಿವಾನುಭವ ಶಬ್ದಕೋಶ' ಕೃತಿಯನ್ನು ರಚಿಸಿದವರು ಯಾರು?
14. ವಚನಕಾರರಿಗೆ ಯಾವುದು ದೇವರಾಗಿತ್ತು?
15. ಕವಿ ಬೇಂದ್ರೆಯವರು ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ಎಂದಿದ್ದಾರೆ?
16. ಅಂತಕಾತ್ಮಜ ಎಂದರೆ ಯಾರು?
17. ಮಾವಿನ ಮರಗಳು ಎಲ್ಲಿ ಮೈತುಂಬಿ ನಿಂತಿವೆ?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಮುದುಕಿಯು ರಾಹಿಲನನ್ನು ಸೈನಿಕರಿಂದ ಹೇಗೆ ರಕ್ಷಿಸಿದಳು?
19. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
21. ಮಂಚಮ್ಮ ಮನೆ ಮಂಚಮ್ಮನಾದ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.
22. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?

23. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?

25. ವಸಂತ ಯಾರು ಯಾರಿಗೆ ಮುಖ ತೋರಲಿಲ್ಲ?

26. ಭಗತ್‌ಸಿಂಗ್ ಮತ್ತು ಆತನ ಸಹಚರರಿಗೆ ಗಲ್ಲುಶಿಕ್ಷೆಯಾಗಲು ಕಾರಣವೇನು?

27. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಸಾ.ರಾ.ಅಬೂಬಕ್ಕರ್

29. ದ.ರಾ.ಬೇಂದ್ರೆ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಒಳಗಿನ ಮಂದಿ ಗುಂಡು ಹೊಡೆದರೂ ಮುಂಗಾರಿ ಸಿಡಿಲು ಸಿಡಿದ್ಹಾಂಗ

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. 
* ಕಟ್ಟುವುದು ಕಠಿಣ ಕೆಡಹುವುದು ಸುಲಭ
* ಕೂಡಿ ಬಾಳಿದರೆ ಸ್ವರ್ಗ ಸುಖ

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ"

34. "ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು"

35. "ದೇವರೇ, ಮರ ಹತ್ತುವಷ್ಟು ಅವಕಾಶ ಕರುಣಿಸು"

36. "ರವಿಸುತನ ಕಿವಿಯಲಿ ಬಿತ್ತಿದನು ಭಯವ.

37. "ಬೇರೆ ಬಣ್ಣವನೆ ಕಾಣೆ"

38. "ನೆಲಕಿಟಿವೆನೆಂದು ಬಗೆದಿರೆ ಚಲಕಿಟಿವೆಂ."

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಕಲುಷಿತವಾದೀ ________ 
________
________
________ಮುಟ್ಟೋಣ

**ಅಥವಾ**

ಮತಗಳೆಲ್ಲವೂ ________
________
________
________ಬಿತ್ತೋಣ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. **1 x 4=4**

ಸಿಟ್ಟೇಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ
ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡು ಹೊಡಿದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೂ ಹಿಡಿದು ದಂಗ
ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಧರ್ಮಬುದ್ಧಿಯು ತನ್ನ ಸತ್ಯವಂತಿಕೆಯನ್ನು ಹೇಗೆ ಪ್ರಮಾಣೀಕರಿಸಿದನು?

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೇ ತಿರುಗುಬಾಣವಾದ ಬಗೆಯನ್ನು ತಿಳಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು? ವಿವರಿಸಿ

**ಅಥವಾ**

ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಒಳಿತೋ ಕೆಡುಕೋ ನಿಮ್ಮ ಅದೃಷ್ಟವನ್ನು ನೀವೇ ರೂಪಿಸಿಕೊಳ್ಳುತ್ತೀರಿ. ಆದುದರಿಂದ ಸ್ಯಾಮುಯೆಲ್ ಸ್ಮೈಲ್ಸ್ ಹೇಳುವಂತೆ "ಒಂದು ಒಳ್ಳೆಯ ಯೋಚನೆ ಮಾಡಿ–ಅದು ನಿಮ್ಮನ್ನು ಒಂದು ಒಳ್ಳೆಯ ಕೆಲಸಕ್ಕೆ ಪ್ರೇರೇಪಿಸೀತು. ಒಂದು ಒಳ್ಳೆಯ ಕಾರ್ಯವನ್ನು ಕೈಗೊಳ್ಳಿರಿ–ಅದು ನಿಮ್ಮನ್ನು ಒಂದು ಒಳ್ಳೆಯ ಅಭ್ಯಾಸಕ್ಕೆಳಸೀತು. ಒಂದು ಒಳ್ಳೆಯ ಅಭ್ಯಾಸವನ್ನು ರೂಢಿಸಿಕೊಳ್ಳಿ–ಅದು ನಿಮ್ಮ ನಡತೆಗೆ ಪುಟಗೊಟ್ಟೀತು. ಒಳ್ಳೆಯ ನಡತೆಯಿಂದ ನಿಮ್ಮ ಅದೃಷ್ಟ ಕುದುರಲೇಬೇಕು. ಅಭ್ಯಾಸದ ಹಿರಿಮೆ ಗರಿಮೆಯೇ ಇಲ್ಲಿ ಧ್ವನಿತವಾಗಿದೆ.

ಒಂದು ಹೊಸ ಅಭ್ಯಾಸವನ್ನು ಕಲಿತು ರೂಢಿಸಿ ದೃಢಪಡಿಸಿಕೊಂದು ಅದನ್ನು ಮನಸ್ಸಿನಲ್ಲಿ ನೆಲೆ ನಿಲ್ಲುವಂತೆ ಮಾಡಲು ಅತ್ಯಂತ ದೃಢ ಸಂಕಲ್ಪದಿಂದ ಪ್ರಾರಂಭಿಸಬೆಕು. ಚಂಚಲತೆ, ಅನಿಶ್ಚಿತತೆ–ಇವು ಯಾವ ಶಿಸ್ತಿಗೂ ಒಳಪಡದ ದುರ್ಬಲ ಮನಸ್ಸಿನ ಸ್ಥಿತಿ. ಸಣ್ಣ ಕೆಲಸವನ್ನಾದರೂ ನಿಯಮಪೂರ್ವಕವಾಗಿ ಮನಗೊಟ್ಟು ಮಾಡುವುದರಿಂದ ಕೆಲಸ ಮಾಡುವ ಶಕ್ತಿ ಸಂಚಯವಾಗುವುದು. ಅಭ್ಯಾಸ ಸಿದ್ಧಿಗಾಗಿ ನಿಷ್ಠೆಯಿಂದ ನಿರಂತರ ಸಾಧನೆ ಮಾಡಲು ಪ್ರೇರಕವಾಗುವ ಪ್ರತಿಯೊಂದು ಅವಕಾಶವನ್ನೂ ಎಚ್ಚರಿಕೆಯಿಂದ ಗಮನಿಸಿ ಉಪಯೋಗಿಸಿಕೊಳ್ಳಬೇಕು. ಹೊಸ ಅಭ್ಯಾಸ ಮನಸ್ಸು, ನರವ್ಯೂಹಗಳಲ್ಲಿ ಆಳವಾಗಿ ಬೇರು ಬಿಡುವವರೆಗೂ ಯೋಜಿಸಿಕೊಂಡು ಸಾಧನೆಯನ್ನು ಒಂದೇ ಒಂದು ದಿನದ ಮಟ್ಟಿಗು ಬಿಡಬಾರದು. ಒಂದು ದಿನ ಕಾರಣಾಂತರದಿಂದ ಅಭ್ಯಾಸ ತಪ್ಪಿಸಿದರೆ ಮರುದಿನ ಹೇಗಾದರೂ ನಿಯಮಗಳಿಂದ ಜಾರಿಕೊಳ್ಳಲು ಮನಸ್ಸು ಕಾರಣ ಹುಡುಕುವುದು.

ಪ್ರಶ್ನೆಗಳು:43 ಅ) ಸ್ಯಾಮುಯೆಲ್ ಸ್ಮೈಲ್ಸ್ ಅವರ ಪ್ರಕಾರ ಅಭ್ಯಾಸದ ಮಹತ್ವವನ್ನು ತಿಳಿಸಿ.

43. ಆ) ಅಭ್ಯಾಸದ ಸಿದ್ಧಿಗಾಗಿ ಯಾವ ಕಾರ್ಯಗಳನ್ನು ಮಾಡಬೇಕು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಉಡುಪಿಯ ಜ್ಞಾನೇಶ್/ಜ್ಞಾನ ಎಂದು ಭಾವಿಸಿಕೊಂಡು ನಿಮ್ಮ ಗ್ರಾಮಕ್ಕೆ ಗ್ರಂಥಾಲಯ ಸೌಲಭ್ಯ ಒದಗಿಸಿಕೊಡುವಂತೆ ಕೋರಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಚನ್ನರಾಯಪಟ್ಟಣದ ನವೋದಯ ಶಾಲೆಯ ಚಿರಂತನ/ಚಿಂತನ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಕೈಗೊಂಡ ಶೈಕ್ಷಣಿಕ ಪ್ರವಾಸ ಕುರಿತು ಅರಸೀಕೆರೆಯಲ್ಲಿರುವ ನಿಮ್ಮ ಗೆಳೆಯ ವಸಂತನಿಗೆ ಒಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಸಂವೇದಾ ತರಗತಿಯಿಂದ ವಿದ್ಯಾರ್ಥಿಗಳಿಗಾದ ಪ್ರಯೋಜನಗಳು

**ಅಥವಾ**

* ಅಕ್ಷರದಾಸೋಹ ಮತ್ತು ಕ್ಷೀರಭಾಗ್ಯಗಳ ಮಹತ್ವ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 6

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. 'ಪೂದೋಟ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

   ಎ) ಕ್ರಿಯಾಸಮಾಸ ಬಿ) ದ್ವಂದ್ವಸಮಾಸ ಸಿ) ತತ್ಪುರುಷ ಸಮಾಸ ಡಿ) ಕರ್ಮಧಾರಯ

2. 'ಇಲ್ಲದ್ದಂಗ' ಪದದ ಗ್ರಾಂಥಿಕ ರೂಪ

   ಎ) ಇಲ್ಲದ್ದಾಗ ಬಿ) ಇಲ್ಲದ ಹಾಗೆ ಸಿ) ಇಲ್ಲದಂಗೆ ಡಿ) ಇಲ್ಲದಾಂಗ

3. ಇವುಗಳಲ್ಲಿ ಕೃದಂತಾವ್ಯಯ ಪದ

   ಎ) ರಾಧೆಗಿಂತ ಬಿ) ಜಾಣತನ ಸಿ) ಮಾಡಲು ಡಿ) ಮಾಟ

4. ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು ಹೀಗೆ ಕರೆಯುವರು.

   ಎ) ಸಾಮಾನ್ಯ ವಾಕ್ಯ ಬಿ) ಸಂಯೋಜಿತ ವಾಕ್ಯ ಸಿ) ಮಿಶ್ರವಾಕ್ಯ ಡಿ) ಸಮ್ಮಿಶ್ರ ವಾಕ್ಯ

5. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಬಳಸುವ ಚಿಹ್ನೆ

   ಎ) ಆವರಣ ಬಿ) ವಿವರಣಾತ್ಮಕ ಸಿ) ಅರ್ಧವಿರಾಮ ಡಿ) ಅಲ್ಪವಿರಾಮ

6. 'ಅಗಡು' ಪದದ ಅರ್ಥ

   ಎ) ಅಡಗು ಬಿ) ಹಡಗು ಸಿ) ಗೌಪ್ಯ ಡಿ) ಶೌರ್ಯ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಪಾರ್ಥನಂ : ದ್ವಿತೀಯಾ ವಿಭಕ್ತಿ : : ದುಶ್ಯಾಸನೊಳ್ : ____________
8. ಸುರಾಸುರ : ಸವರ್ಣದೀರ್ಘಸಂಧಿ : : ದಿಗಂತ : ____________
9. ಸ್ಯಾನಿಟರಿ : ಇಂಗ್ಲೀಷ್ : : ದಿವಾನ : ____________
10. ಕೆನೆಮೊಸರು : ಜೋಡುನುಡಿ : : ಸರಸರನೆ: ____________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ಮನೆ ಮಂಚಮ್ಮ ಯಾರು?
12. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ ನೀಡಿ ಗೌರವಿಸಿದ ಪದವಿ ಯಾವುದು?
13. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾಗಿದ್ದರು?
14. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
15. ಕಾಡುಮೇಡುಗಳ ಸ್ಥಿತಿ ಹೇಗಿದೆ?
16. ಸೀತೆ ಯಾರ ಆಶ್ರಮದಲ್ಲಿ ಆಶ್ರಯ ಪಡೆದಿದ್ದಳು ?
17. ವಿವೇಕಾನಂದರನ್ನು 'ಮಾನವತಾ ಮಿತ್ರ'ರೆಂದು ಕರೆದವರಾರು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ನದಿಯಲ್ಲಿ ಬಿದ್ದ ರಾಹಿಲನು ಮುದುಕಿಯ ಮನೆಯನ್ನು ತಲುಪಿದ ಬಗೆಯನ್ನು ವಿವರಿಸಿ.
19. ನಾಲ್ವಡಿ ಕೃಷ್ಣರಾಜ ಒಡೆಯರ ನ್ಯಾಯವಿಧಾಯಕ ಸಭೆ ಹೇಗೆ ಕಾರ್ಯನಿರ್ವಹಿಸುತ್ತಿತ್ತು?
20. ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ನಡೆಸಿದ ಹೋರಾಟ ವಿವರಿಸಿ.
21. ದುಷ್ಟಬುದ್ಧಿಯು ಧರ್ಮಬುದ್ಧಿಗೆ ಯಾವ ಸಲಹೆಯಿತ್ತನು?

22. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
23. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?
24. ವಿವೇಕಾನಂದರು ಇಂದಿಗೂ ಸತ್ಯ. ಏಕೆ?
25. ಪುಟ್ಟಿಯ ಪ್ರಶ್ನೆಗಳಾವುವು?
26. ಭಗತ್‌ಸಿಂಗ್ ಅಮರನಾದುದು ಹೇಗೆ?
27. ಒಗಟಿನ ಉತ್ತರ ಅಂಗಿ ಎಂಬುದನ್ನು ಹೇಗೆ ಸಮರ್ಥಿಸುವಿರಿ.

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ದೇವನೂರ ಮಹಾದೇವ
29. ಕುಮಾರವ್ಯಾಸ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಹಾ ಹಾ ಭಾರತ ಭಾಗ್ಯ ಭಾಸ್ಕರ ಕುರುತ್ರಾತಾರ ದಾತಾರನೇ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಕೈ ಕೆಸರಾದರೆ ಬಾಯಿ ಮೊಸರು
 * ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಹೇಗಾದರೂ ನೆಲ ಮುಟ್ಟಿದ್ದರೆ ಸಾಕಾಗಿತ್ತು"
34. "ಹುಲಿ ಈಗ ಎಷ್ಟು ಹಸಿದಿರಬೇಕು"
35. "ಈತನ ಮಾತು ಅಶ್ರುತಪೂರ್ವಮ್"
36. "ಹೊಸ ಎಚ್ಚರದೊಳು ಬದುಕೋಣ."
37. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"
38. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ನೀಲ ಮೇಘ ______________
______________
______________
______________
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ ______________
______________
______________
______________
ಹಕ್ಕಿ ಹಾರುತಿದೆ ನೋಡಿದಿರಾ?

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ಅಶ್ವೀಜದ ಶಾಲಿವನದ **1 x 4=4**
ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ನಮ್ಮ ಸುತ್ತ ಮುತ್ತ ಇರುವ ಬೆಟ್ಟ-ಗುಡ್ಡಗಳು, ಮರಗಿಡಗಳು, ನಾವಿರುವ ಭೂಮಿ, ಸಾಗರ-ಸರೋವರಗಳು, ಹಳ್ಳಕೊಳ್ಳಗಳು, ಪಶುಪಕ್ಷಿಗಳು ಅರಣ್ಯ, ಗಾಳಿ, ಆಕಾಶ ಇವೆಲ್ಲವೂ ಸೇರಿ ಪರಿಸರವೆನಿಸಿದೆ. ಈ ಪರಿಸರವನ್ನೇ ಪ್ರಕೃತಿ ಅಥವಾ ನಿಸರ್ಗವೆಂದು ಕರೆಯುತ್ತಾರೆ. ಪರಿಸರವನ್ನು ಮುಖ್ಯವಾಗಿ ಪ್ರಾಕೃತಿಕ ಪರಿಸರ ಮತ್ತು ಮಾನವ ನಿರ್ಮಿತ ಪರಿಸರವೆಂದು ವಿಭಾಗಿಸುತ್ತೇವೆ. ನದಿ, ಸಮುದ್ರ, ಸರೋವರ, ಅರಣ್ಯ, ಬೆಟ್ಟ-ಗುಡ್ಡ, ಪರ್ವತ ಮುಂತಾದವುಗಳು ಪ್ರಾಕೃತಿಕ ಪರಿಸರವಾದರೆ, ಕಟ್ಟಡಗಳು, ಕೃಷಿಭೂಮಿ, ಕೈಗಾರಿಕೆಗಳು, ನಗರಗಳು, ಅಣೆಕಟ್ಟುಗಳು, ಕಾಲುವೆ, ರಸ್ತೆಗಳು ಮಾನವ ನಿರ್ಮಿತ ಪರಿಸರವಾಗಿದೆ. ಪರಿಸರವನ್ನು ಬಿಟ್ಟು ಮನುಷ್ಯ ಜೀವನ ಸಾಧ್ಯವೇ ಇಲ್ಲ. ಆದರೆ ಇಂದು ಮನುಷ್ಯ ತನ್ನ ಸ್ವಾರ್ಥ ಸುಖಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾನೆ. ಪರಿಸರವನ್ನು ಹಾಳು ಮಾಡುತ್ತಿದ್ದಾನೆ. ಇದರಿಂದಾಗಿ, ಅತಿವೃಷ್ಟಿ, ಅನಾವೃಷ್ಟಿ, ಹವಾಮಾನದ ಏರುಪೇರುಗಳು ಸಂಭವಿಸಿ, ಸುನಾಮಿ, ಪ್ರವಾಹ, ಚಂಡಮಾರುತ, ಭೂಕಂಪ ಮೊದಲಾದ ಪ್ರಕೃತಿ ವಿಕೋಪಗಳು ಉಂಟಾಗುತ್ತಿವೆ.

ಪ್ರಶ್ನೆಗಳು:43 ಅ) ಪ್ರಕೃತಿ ವಿಕೋಪಗಳು ಉಂಟಾಗಲು ಕಾರಣಗಳೇನು?

43 ಆ) ಪ್ರಕೃತಿ ಎಂದರೇನು? ಅದರ ಬಗೆಗಳಾವುವು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಅರಸೀಕೆರೆಯ ಸರ್ಕಾರಿ ಪ್ರೌಢಶಾಲೆಯ ಅಪೂರ್ವ ಎಂದು ಭಾವಿಸಿಕೊಂಡು ಮಂಗಳೂರಿನ ಪಿಲಿಕುಳ ನಿಸರ್ಗಧಾಮದ ವ್ಯವಸ್ಥಾಪಕರಿಗೆ ಪ್ರದರ್ಶನ ಸಮಯವನ್ನು ತಿಳಿಸುವಂತೆ ಕೋರಿ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಅರಕಲಗೂಡಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸುದರ್ಶನ್ ಎಂದು ಭಾವಿಸಿಕೊಂಡು ನಂಜನಗೂಡಿನಲ್ಲಿರುವ ನಿಮ್ಮ ತಾಯಿ 'ರೇಖಾ' ಎಂಬುವವರಿಗೆ ಕ್ಷೇಮ ಸಮಾಚಾರ ತಿಳಿಸುತ್ತಾ ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಸಾಮಾಜಿಕ ಪಿಡುಗುಗಳು

**ಅಥವಾ**

* ಕೊರೋನಾ ನಿಯಂತ್ರಣದಲ್ಲಿ ಕೊರೋನಾ ವಾರಿಯರ್‌ಗಳ ಪಾತ್ರ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 7

ಸಮಯ: 3 ಗಂಟೆ | **ಪ್ರಥಮ ಭಾಷೆ ಕನ್ನಡ (01 K)** | ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ವರ್ಗದ ಪಂಚಮಾಕ್ಷರಗಳನ್ನು ಹೀಗೆನ್ನುವರು.
   ಎ) ಅಲ್ಪಪ್ರಾಣ ಬಿ) ಸಂಧ್ಯಕ್ಷರ ಸಿ) ಅನುನಾಸಿಕ ಡಿ) ಅವರ್ಗೀಯ
2. ಇವುಗಳಲ್ಲಿ ರೂಢನಾಮವಲ್ಲದ್ದು
   ಎ) ಸಂಗೀತ ಬಿ) ಬೆಟ್ಟ ಸಿ) ನದಿ ಡಿ) ಪರ್ವತ
3. 'ತಿನ್ನು' ಎಂಬ ಧಾತುವಿನ ಸಂಭಾವನಾರ್ಥಕ ಕ್ರಿಯಾರೂಪ
   ಎ) ತಿನ್ನಲಿ ಬಿ) ತಿಂದಾನು ಸಿ) ತಿನ್ನನು ಡಿ) ತಿಂದ
4. 'ದಲ್ಲಾಳಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಎ) ಅರಬ್ಬೀ ಬಿ) ಉರ್ದು ಸಿ) ಫಾರ್ಸಿ ಡಿ) ಹಿಂದೂಸ್ಥಾನಿ
5. ತದ್ಧಿತಾಂತ ಭಾವನಾಮಕ್ಕೆ ಉದಾಹರಣೆ
   ಎ) ಚಂದ್ರನವೊಲ್ ಬಿ) ನನಗಾಗಿ ಸಿ) ಪೆರ್ಮೆ ಡಿ) ಸಿರಿವಂತೆ
6. 'ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವಿಶ್ವೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿತು' ಈ ವಾಕ್ಯದ ವಿಧ
   ಎ) ಸಾಮಾನ್ಯವಾಕ್ಯ ಬಿ) ವಿಧ್ಯರ್ಥಕ ವಾಕ್ಯ ಸಿ) ಮಿಶ್ರವಾಕ್ಯ ಡಿ) ಸಂಯೋಜಿತ ವಾಕ್ಯ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಅವರು : ಪ್ರಥಮ ಪುರುಷ : : ತಾಂ : ________
8. ಕಾರ್ಯ : ಕಜ್ಜ : : ಕೊಡಲಿ : ________
9. ಹೀಂಗ : ಹೀಗೆ : : ಸಕ್ಕಾರಿ : ________
10. ಉಂಟು ಕ್ರಿಯಾರ್ಥಕಾವ್ಯಯ : : ರೊಯ್ಯನೆ : ________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ರಾಹಿಲನು ಯಾರು?
12. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?
13. ಹುಲಿಯು ಎಲ್ಲಿ ಮಲಗಿತ್ತು?
14. ಶಾನುಭೋಗರ ಪ್ರಾಣವನ್ನು ಕಾಪಾಡಿದ ಖಿರ್ದಿ ಪುಸ್ತಕ ಎಲ್ಲಿ ವಿಶ್ರಾಂತಿ ಪಡೆಯುತ್ತಿದೆ?
15. ಜಿ.ಎಸ್. ಶಿವರುದ್ರಪ್ಪನವರು ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ಎಂದಿದ್ದಾರೆ?
16. ಮುರಾರಿ ಎಂದು ಯಾರನ್ನು ಕರೆಯುತ್ತಾರೆ?
17. ಗರಿಕೆಯು ಯಾರನ್ನು ಕಂಡು ನಗುವುದು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
19. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯನವರು ಮಾಡಿದ ಮಾರ್ಪಾಟುಗಳನ್ನು ವಿವರಿಸಿ.
20. ಶಾನುಭೋಗರು ಕುಲಾಲಚಕ್ರದಂತೆ ತಿರುಗಲು ಕಾರಣವೇನು?
21. ಧರ್ಮಬುದ್ಧಿಯು 'ಪುಸಿಯದ ಬೇಹಾರಿಯೇ ಇಲ್ಲ' ಎಂದು ಹೇಳಲು ಕಾರಣವೇನು?

22. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?

23. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

24. ವಿವೇಕಾನಂದರು ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ. ಏಕೆ?

25. ವಸಂತ ಮುಖ ತೋರಲಿಲ್ಲ– ಕವನದಲ್ಲಿ ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಹೇಗೆ ಚಿತ್ರಿಸಲಾಗಿದೆ?

26. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು?

27. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ದುರ್ಗಸಿಂಹ

29. ರನ್ನ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಕಾರುಣ್ಯಂಗೆಯ್ದುಸದ್ದೀಕ್ಷೆಯನೆಸಗಿಲಸಚ್ಚಿತ್ರಿಯಾ ಮಾರ್ಗಮಂಪೇ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು.

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?
* ಹಾಸಿಗೆ ಇದ್ದಷ್ಟು ಕಾಲು ಚಾಚು

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"

34. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು"

35. "ಮರಣವಲ್ಲ ಮುಕ್ತಿ ಪ್ರಭೋ ಇದುವೆ ನನ್ನ ಪೂಣ್ಕೆ"

36. "ಮುಂಗಾರಿನ ಮಳೆಯಾಗೋಣ."

37. "ಜೀಯ ಹಸಾದವೆಂಬುದು ಕಷ್ಟ"

38. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
______________________
______________________
______________________
______________________
____________ ಲವನುರಿದೆದ್ದನು.

**ಅಥವಾ**

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ
______________________
______________________
______________________
______________________
____________ ನಿಂತಿರ್ದನು.

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. **1 x 4=4**

ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣೆ ಹಾಲಾ
ಉಪ್ಪು ಎಣ್ಣೆ ಅರಿಸಿಣ ಜೀರಿಗಿ ಅಕ್ಕಿಸಕ್ಕಾರಿ ಬೆಲ್ಲಾ
ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ
ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ರಾಹಿಲನು ಮುದುಕಿಯ ಕುಟುಂಬಕ್ಕೂ ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ

**ಅಥವಾ**

ಯುದ್ಧದಿಂದಾಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

42. ಕಾಲಪಕ್ಷಿಯ ಹೊಡತಕ್ಕೆ ಮಾನವ ಪ್ರಪಂಚದಲ್ಲಾಗುವ ವೈಚಿತ್ರ್ಯಗಳನ್ನು ದ.ರಾ.ಬೇಂದ್ರೆ ಹೇಗೆ ವರ್ಣಿಸಿದ್ದಾರೆ?

**ಅಥವಾ**

ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಗೂಡು, ಹಕ್ಕಿಗಳಲ್ಲಿರುವ ತಂತ್ರಜ್ಞಾನಕ್ಕೆ ಅವು ಪಡುವ ಶ್ರಮ ಮತ್ತು ಪಡೆದಿರುವ ಕುಶಲತೆಗೆ ಹಿಡಿದ ಕನ್ನಡಿ. ಕೆಲವು ಕೀಟ, ಉರಗ ಸಂತತಿ ಮತ್ತು ಹಲವು ಸಸ್ತನಿಗಳೂ ಗೂಡು ಕಟ್ಟುತ್ತವೆ. ಆದರೆ ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಬೇರಾವುದಕ್ಕೂ ಬಾರದು. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ. ಅನೇಕ ವಸ್ತುಗಳನ್ನು ಸಮನ್ವಯಗೊಳಿಸಿ ಮನೆ ನಿರ್ಮಿಸುವ ಮನುಷ್ಯನ ಜಾಣ್ಮೆಯೂ ಕೆಲವೊಮ್ಮೆ ಈ ಚೋಟುದ್ದ ಹಕ್ಕಿಗಳ ಮುಂದೆ ನಾಚುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲೂ ಭಿನ್ನವಾದ ವಸ್ತುವನ್ನು ಬಳಸಬಲ್ಲವು. ಒಳಗಡೆಯ ಗೋಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಗೂಡನ್ನು ಅಂದಗೊಳಿಸುವ ಸೌಂದರ್ಯಪ್ರಜ್ಞೆಯೂ ಅವಕ್ಕಿದೆ. ಆದರೆ, ಈ ಎಲ್ಲಾ ಕ್ರಿಯೆಗಳಿಗೂ ಅರ್ಥವಿರುತ್ತದೆ, ಸ್ಪಷ್ಟವಾದ ಉದ್ದೇಶವಿರುತ್ತದೆ. ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಎತ್ತರದ ಮರದ ತುದಿ, ಕಣಿವೆ, ಬಿಲ, ದ್ವೀಪ ಅಥವಾ ನೀರಿನ ಮೇಲೆ ಅವು ಗೂಡು ಕಟ್ಟಬೇಕು.

ಪ್ರಶ್ನೆಗಳು:43 ಅ) ಹಕ್ಕಿಗಳು ಗೂಡು ಕಟ್ಟುವ ಉದ್ದೇಶಗಳಾವುವು?

43. ಆ) ಹಕ್ಕಿಗಳು ಗೂಡು ಕಟ್ಟುವಲ್ಲಿ ತೋರಿಸುವ ಜಾಣಾಕ್ಷತೆ ವಿವರಿಸಿ.

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಆಲೂರಿನ ಸರ್ಕಾರಿ ಪ್ರೌಢಶಾಲೆಯ ರಮ್ಯ/ ರಾಮ ಎಂದು ಭಾವಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ಇವರು ಪ್ರಕಟಿಸಿರುವ 'ಕನ್ನಡ ನಿಘಂಟು' ಇದರ ಹತ್ತು ಪ್ರತಿಗಳನ್ನು ಕಳುಹಿಸಿಕೊಡುವಂತೆ ಕೋರಿ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವ ಕಾರ್ಯಕ್ರಮದ ಬಗ್ಗೆ ಹಾವೇರಿಯಲ್ಲಿರುವ ನಿಮ್ಮ ಗೆಳೆಯ ಪ್ರಶಾಂತ್ ಎಂಬುವವರಿಗೊಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಯೋಗ ಶಿಕ್ಷಣದ ಮಹತ್ವ

**ಅಥವಾ**

* ಶಾಲೆಯಲ್ಲಿ ಸಹಪಠ್ಯ ಚಟುವಟಿಕೆಗಳ ಮಹತ್ವ

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 8

ಸಮಯ: 3 ಗಂಟೆ | **ಪ್ರಥಮ ಭಾಷೆ ಕನ್ನಡ (01 K)** | ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಎರಡೆರಡು ವ್ಯಂಜನಗಳು ಪುನರಾವರ್ತನೆಗೊಂಡರೆ ಆ ಪ್ರಾಸದ ವಿಧ
   ಎ) ವೃತ್ಯನುಪ್ರಾಸ ಬಿ) ಛೇಕಾನುಪ್ರಾಸ ಸಿ) ಚಿತ್ರಕವಿತ್ವ ಡಿ) ಯಮಕ
2. 'ದಿನಪಸುತ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಎ) ಅಂಶಿ ಸಮಾಸ ಬಿ) ದ್ವಿಗು ಸಮಾಸ ಸಿ) ಬಹುವ್ರೀಹಿ ಸಮಾಸ ಡಿ) ತತ್ಪುರುಷ ಸಮಾಸ
3. ಪಂಚಮಿ ವಿಭಕ್ತಿಯ ಕಾರಕಾರ್ಥ
   ಎ) ಕರ್ಮಾರ್ಥ ಬಿ) ಸಂಪ್ರದಾನ ಸಿ) ಅಪಾದಾನ ಡಿ) ಅಧಿಕರಣ
4. 'ಲೇಖನವನೋದಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಸವರ್ಣದೀರ್ಘಸಂಧಿ ಬಿ) ಲೋಪಸಂಧಿ ಸಿ) ಗುಣಸಂಧಿ ಡಿ) ಆದೇಶಸಂಧಿ
5. 'ಕಾರ್ಖಾನೆ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಎ) ಫಾರ್ಸಿ ಬಿ) ಉರ್ದು ಸಿ) ಹಿಂದೂಸ್ಥಾನಿ ಡಿ) ಗ್ರೀಕ್
6. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಚಿಹ್ನೆ
   ಎ) ಅಲ್ಪವಿರಾಮ ಬಿ) ಅರ್ಧವಿರಾಮ ಸಿ) ಭಾವಸೂಚಕ ಡಿ) ಪ್ರಶ್ನಾರ್ಥಕ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ತಪಸ್ವಿ : ತವಸಿ : : ವಿದ್ಯಾಧರ : ________
8. ಚೆಲುವಿಕೆ : ತದ್ಧಿತಾಂತ ಭಾವನಾಮ : : ನಂಬಿಕೆ : ________
9. ದಿನದಿನ : ದ್ವಿರುಕ್ತಿ : ಬಿಳಿಹೊಳೆ : ________
10. ಮೇದಿನಿ : ಭೂಮಿ : ಸುಸಂಗತ : ________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ದುಷ್ಟಬುದ್ಧಿಯು ಸಾಕ್ಷಿಹೇಳಲು ಯಾರನ್ನು ಸಿದ್ಧಪಡಿಸಿದನು?
12. ವಟವೃಕ್ಷದಲ್ಲಿ ಯಾವ ದೇವತೆಗಳು ನೆಲೆಸಿರುವರೆಂದು ಧರ್ಮಾಧಿಕರಣರು ಹೇಳಿದರು?
13. ವಿಶ್ವೇಶ್ವರಯ್ಯನವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?
14. ಸೀತೆಯನ್ನು ಯಾರು ಕಾಪಾಡುತ್ತಾರೆಂದು ಲಕ್ಷ್ಮಣನು ಹೇಳುತ್ತಾನೆ?
15. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?
16. ಮುನಿಸುತರು ಹೆದರಲು ಕಾರಣವೇನು?
17. ಭಗತ್‌ಸಿಂಗ್‌ನ ಸಹಚರರು ಯಾರು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ಮುದುಕಿಯು ರಾಹಿಲನಿಗೆ ಮಾಡಿದ ಸಹಾಯವನ್ನು ವಿವರಿಸಿ.
19. ಕೃಷ್ಣಮೂರ್ತಿಯ ಹಿರಿಯರ ಬಗ್ಗೆ ಬರೆಯಿರಿ.
20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

23. ಹಲಗಲಿ ದಂಗೆಯನ್ನು ಸರಕಾರ ಹೇಗೆ ನಿಯಂತ್ರಿಸಿತು?

24. ವಿವೇಕಾನಂದರು ಯಾವುದರ ರೂಪಕವಾಗಿದ್ದಾರೆ. ತಿಳಿಸಿ.

25. ಪುಟ್ಟಪೋರಿಯ ಜೀವನ ಸ್ಥಿತಿ ಹೇಗಿದೆ?

26. ಭಗತ್‌ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಈ ಮಣ್ಣು ಎಂದು ಹೇಳಲು ಕಾರಣವೇನು?

27. ಅಂಗಿ ಎಂಬ ಉತ್ತರ ಬರುವ ಬೆಡಗಿನ ಪ್ರಶ್ನೆಯನ್ನು ಸಮರ್ಥಿಸಿ.

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಪು.ತಿ.ನ

29. ಜಿ.ಎಸ್.ಶಿವರುದ್ರಪ್ಪ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಕಾಯಕವೇ ಕೈಲಾಸ
* ದೇಶಸುತ್ತು ಕೋಶ ಓದು

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ?"

34. "ತಮ್ಮ ಪ್ರಜ್ಞೆ ಮುಂದೆ ಸುಳ್ಳು ಹೇಳಕ್ಕಾಗಲ್ಲ"

35. "ಮಡಿಯಬೇಕಾದರೆ ಮಾಡಿಯೇ ಮಡಿಯುತ್ತೇನೆ"

36. "ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ"

37. "ಜೀಯ ಹಸಾದವೆಂಬುದು ಕಷ್ಟ"

38. "ರಘೂದ್ವಹನ ಸೊಲ್ಗೇಳಿ ನಮಿಸಲ್"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ನೆಲಕಿಟಿವೆನೆಂದು ____________

____________

____________

____________ಪುದುವಾಟ್ಟಿಪೆನೇ

**ಅಥವಾ**

ಪುಟ್ಟಿದ ____________

____________

____________

____________ಛಲಮನೆ ಮೆಱೆವೆಂ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ **1 x 4=4**
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯನವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. 'ಹಸುರು' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

**ಅಥವಾ**

ಪ್ರಕೃತಿಯ 'ಹಸುರು' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಕ್ರಿಕೆಟ್ ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಸಹಸ್ರಾರು ಯುವಕರು ಚಪ್ಪಾಳೆ ತಟ್ಟಿ ಹುಚ್ಚೆದ್ದು ಕುಣಿದು ಅವನನ್ನು ಹೆಗಲ ಮೇಲೇರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ? ಅದು ಅವನ ಶಕ್ತಿ ಸಾಮರ್ಥ್ಯ ದಕ್ಷತೆಗಳಿಗೆ ಸಲ್ಲಿಸಿದ ಗೌರವವಲ್ಲವೇ? ಶಕ್ತಿಯನ್ನು ಎಲ್ಲರೂ ಭಕ್ತಿ ಗೌರವಗಳಿಂದ ನೋಡುತ್ತಾರೆ. 'ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತಜನರೇ ವೈರಿಗಳು' ಎಂದು ಪುರಂದರದಾಸರು ಹೇಳಿದ ಮಾತು ಎಷ್ಟು ಸತ್ಯ!. ತಂದೆತಾಯಂದಿರು ಪ್ರೀತಿಯಿಂದ ಸಾಕಿ ಸಲಹಿದ ಮಗು ಬೆಳೆದು ದುರ್ಬಲನೂ ರೋಗಿಷ್ಠನೂ ದಡ್ಡನೂ ಮೂರ್ಖನೂ ಆದರೆ ಏನೆನ್ನುವರು ಬಲ್ಲಿರಾ? 'ಯಾಕಾಗಿ ಹುಟ್ಟಿದನಿವನು ಕುಲಕ್ಕೆ ಕಳಂಕ' ಎನ್ನುವರು. ಶಕ್ತನಿಗೆ ಎಲ್ಲರೂ ಆಪ್ತರು, ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು. ದೇಹ ಮನಸ್ಸು ಸರಿಯಾಗಿರುವ ನಾವು ನಮಗೆ ಕೂಡ ಮಾಡಿದ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ನಮ್ಮ ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕು.

43. ಪ್ರಶ್ನೆಗಳು :

ಎ) ದಾಂಡಿಗನನ್ನು ಎತ್ತಿ ಮೆರೆಸಲು ಕಾರಣವೇನು?

ಬಿ) ದುರ್ಬಲನನ್ನು ಜಗತ್ತು ಹೇಗೆ ನೋಡಿಕೊಳ್ಳುತ್ತದೆ?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಬೇಲೂರಿನ ಸರ್ಕಾರಿ ಪ್ರೌಢಶಾಲೆಯ ಜೀವಿತ / ಜಯಂತ್ ಎಂದು ಭಾವಿಸಿಕೊಂಡು ಬೆಳೆ ನಷ್ಟದ ಪರಿಹಾರ ಕೋರಿ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಬಾಣಾವರದ ಸರ್ಕಾರಿ ಪ್ರೌಢಶಾಲೆಯ ತನಿಷ್ಕಾ/ ತರುಣ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಬಾಹ್ಯಾಕಾಶದಲ್ಲಿ ಭಾರತೀಯರ ಸಾಧನೆ

**ಅಥವಾ**

* ಮಕ್ಕಳ ಹಕ್ಕುಗಳು

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 9

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 x 1 = 6**

1. ಪ್ರಥಮ ವಿಭಕ್ತಿಯ ಕಾರಕಾರ್ಥ
   ಎ) ಕರಣ ಬಿ) ಕರ್ಮ ಸಿ) ಕರ್ತೃ ಡಿ) ಸಂಪ್ರದಾನ
2. 'ಸಾಬೂನು' ಎಂಬ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   ಎ) ರೋಮನ್ ಬಿ) ಪೋರ್ಚುಗೀಸ್ ಸಿ) ಅರಬ್ಬೀ ಡಿ) ಹಿಂದೂಸ್ಥಾನಿ
3. ಕ್ರಿಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು
   ಎ) ಅಥವಾ ಬಿ) ಅದುವೇ ಸಿ) ಸಾಕು ಡಿ) ಸೊಗಸಾಗಿ
4. 'ಅಂಜಿಕೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
   ಎ) ಕೃದಂತನಾಮ ಬಿ) ಕೃದಂತ ಭಾವನಾಮ ಸಿ) ತದ್ಧಿತಾಂತ ನಾಮ ಡಿ) ತದ್ಧಿತಾಂತ ಭಾವನಾಮ
5. ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥ ಕೊಡುವಂತಿದ್ದರೆ ಅಂತಹ ಪದಕ್ಕೆ ಹೀಗೆನ್ನುವರು
   ಎ) ರೂಪಕ ಪದ ಬಿ) ಉಪಮಾ ಪದ ಸಿ) ಶ್ಲೇಷ ಪದ ಡಿ) ದೃಷ್ಟಾಂತ ಪದ
6. ಹರ್ಷ, ಸಂತೋಷ, ಆಶ್ಚರ್ಯ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುತ್ತದೆ.
   ಎ) ಪ್ರಶ್ನಾರ್ಥಕ ಚಿಹ್ನೆ ಬಿ) ಉದ್ಧರಣ ಚಿಹ್ನೆ ಸಿ) ಭಾವಸೂಚಕ ಚಿಹ್ನೆ ಡಿ) ಅರ್ಧವಿರಾಮ ಚಿಹ್ನೆ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ: 1 x 4 =4**

7. ಕಂದಪದ್ಯ : 64 : : ಭಾಮಿನಿ ಷಟ್ಪದಿ : ______
8. ಇಮ್ಮಾವು : ಕರ್ಮಧಾರಯ ಸಮಾಸ : : ನೇಯ್ದವಸ್ತ್ರ : ______
9. ಕೋಲುಕಾರ : ತದ್ಧಿತಾಂತನಾಮ : : ಶಾಲೆಯವರೆಗೆ : ______
10. ಸುಪರ್ದಿ : ವಶ : : ಅಸ್ತಿಭಾರ : ______

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x 1 = 7**

11. ರಾಹಿಲನು ತನ್ನ ಕಾಲಿನ ಆರೈಕೆಯನ್ನು ಹೇಗೆ ಮಾಡಿದನು?
12. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
13. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
14. ವಚನಕಾರರಿಗೆ ಯಾವುದು ದೇವರಾಗಿತ್ತು?
15. ಕುಂಪಣಿ ಸರಕಾರ ಹೊರಡಿಸಿದ ಆದೇಶ ಏನು?
16. ರಾಜೀವಸಖ ಎಂದು ಯಾರನ್ನು ಕರೆಯುತ್ತಾರೆ?
17. ಬಾಲರವಿ ಎಲ್ಲಿ ಸೊರಗಿದ್ದಾನೆ?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 10 x 2 = 20**

18. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?
19. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕಾರ್ಯರೂಪಕ್ಕೆ ಬಂದ ನೀರಾವರಿ ಯೋಜನೆಗಳ ಬಗ್ಗೆ ವಿವರಿಸಿ.

21. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?

23. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

25. ಪುಟ್ಟಿ ಮೂಕ ವಿಸ್ಮಿತಳಾಗಲು ಕಾರಣವೇನು?

26. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನಲ್ಲಿ ಅಂತರ್ಮುಖಿಯಾಗಿ ನಿಲ್ಲಲು ಕಾರಣವೇನು?

27. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಡಿ.ಎಸ್.ಜಯಪ್ಪಗೌಡ

29. ಲಕ್ಷ್ಮೀಶ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು
ಳ್ಳನ್ನಗಂ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ನುಡಿದರೆ ಮುತ್ತಿನ ಹಾರದಂತಿರಬೇಕು

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಆಳಾಗಬಲ್ಲವನು ಅರಸನಾಗಬಲ್ಲನು
* ಮಾತು ಆಡಿದರೆ ಹೋಯ್ತು; ಮುತ್ತು ಒಡೆದರೆ ಹೋಯ್ತು

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. “ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು”

34. “ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು”

35. “ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ”

36. “ಬಲ್ಲರು ಯಾರಾ ಹಾಕಿದ ಹೊಂಚ”

37. “ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು”

38. “ನಿನ್ನಪದೆಸೆಯ ಬಯಸುವವನಲ್ಲ”

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಹಸುರಾಗಸ; ________________      ಹೊಸ ಹೂವಿನ ____________

________________________      ________________________

________________________ **ಅಥವಾ** ________________________

__________________ಬಿಸಿಲೂ!      __________________ ಯುಸಿರೂ!

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ **1 x 4=4**
ಹೊಸ ಭರವಸೆಗಳ ಕಟ್ಟೋಣ.
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ.

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

**ಅಥವಾ**

ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಕೋವಿಡ್‌–19 ಸೋಂಕಿನ ಕಾರಣದಿಂದ ಏಷ್ಯ ಹಾಗೂ ಯೂರೋಪ್ ಖಂಡದ ದೇಶಗಳಲ್ಲಿ ವಿಧಿಸಲಾಗಿರುವ ಲಾಕ್‌ಡೌನ್ ನಿರ್ಬಂಧಗಳನ್ನು ಬೇಗನೆ ತೆರವುಗೊಳಿಸಿ ಆರ್ಥಿಕ ಪುನಶ್ಚೇತನಕ್ಕಾಗಿ ವ್ಯಾಪಾರ, ಉದ್ಯಮಗಳನ್ನು ಪುನಃ ಆರಂಭಿಸಬಾರದು, ಒಂದು ವೇಳೆ ಆರಂಭಿಸಿದರೆ ಮತ್ತೊಮ್ಮೆ ಈ ಸಾಂಕ್ರಾಮಿಕ ಸ್ಫೋಟಗೊಳ್ಳಬಹುದು ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಇಬ್ಬರು ಅರ್ಥಶಾಸ್ತ್ರಜ್ಞರು ಇತ್ತೀಚೆಗೆ ಎಚ್ಚರಿಕೆ ನೀಡಿದ್ದಾರೆ. ಇಷ್ಟು ಬೇಗನೆ ಉದ್ಯಮಗಳನ್ನು ಆರಂಭಿಸಿದರೆ, ಸೋಂಕು ಹರಡುವಿಕೆಯನ್ನು ತಡೆಯುವುದರಲ್ಲಿ ಈ ತನಕ ಸಾಧಿಸಲಾಗಿರುವ ಪ್ರಗತಿಯೂ ಕೈಬಿಟ್ಟುಹೋಗಬಹುದು ಹಾಗೂ ಹೊಸ ಬಗೆಯ ಬಿಕ್ಕಟ್ಟು ಸೃಷ್ಟಿಯಾಗಬಹುದು ಎಂದು ಐಎಂಎಫ್‌ನ ಮುಖ್ಯಸ್ಥರು ಹೇಳಿದ್ದಾರೆ. ದಕ್ಷಿಣ ಮತ್ತು ಏಷ್ಯ ಭಾಗಗಳಲ್ಲಿ ಲಕ್ಷಾಂತರ ಮಂದಿ ಕೋವಿಡ್‌–19 ಸೋಂಕಿಗೆ ಒಳಗಾಗಿದ್ದಾರೆ ಮತ್ತು ಸಾವಿರಾರು ಮಂದಿ ಸಾವಿಗೀಡಾಗಿದ್ದಾರೆ. ಯೂರೋಪ್ ಖಂಡ ಕೋವಿಡ್‌–19 ಸೋಂಕಿನ ಭೀಕರ ದಾಳಿಗೆ ಒಳಗಾಗಿದೆ. ಜಗತ್ತಿನಾದ್ಯಂತ ಲಾಕ್‌ಡೌನ್ ವಿಧಿಸಿರುವುದು ಜನಸಾಮಾನ್ಯರ ಮಾನಸಿಕ ಹಾಗೂ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀರಿದೆ. ಇದನ್ನು ನೀಗಿಸಲೆಂದು ವ್ಯಾಪಾರ–ಉದ್ಯಮಗಳನ್ನು ಪುನಃ ಪ್ರಾರಂಭಿಸಲು ದೇಶಗಳು ಉತ್ಸುಕವಾಗಿರುವುದು ಸಹಜ. ಆದರೆ ಏಷ್ಯಾ ಮತ್ತು ಯೂರೋಪ್ ಖಂಡಗಳು ಉದ್ಯಮಗಳನ್ನು ಪುನಃ ಆರಂಭಿಸುವಾಗ ಎಚ್ಚರಿಕೆಯ ಹೆಜ್ಜೆಗಳನ್ನು ಇರಿಸಬೇಕು ಎಂದು ಈ ಅರ್ಥಶಾಸ್ತ್ರಜ್ಞರು ಸಲಹೆ ನೀಡಿದ್ದಾರೆ.

ಪ್ರಶ್ನೆಗಳು : 43 ಅ) ಜಗತ್ತಿನಾದ್ಯಂತ ಕೋವಿಡ್‌–19ರ ಹೇಗೆ ಪರಿಣಾಮ ಬೀರಿದೆ?

ಆ) ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಅರ್ಥಶಾಸ್ತ್ರಜ್ಞರು ನೀಡಿರುವ ಎಚ್ಚರಿಕೆ ಏನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಮಳವಳ್ಳಿಯ ಪ್ರಣತಿ/ಪ್ರದೀಪ ಎಂದು ಭಾವಿಸಿಕೊಂಡು ನಿಮ್ಮ ಶಾಲಾ ಗ್ರಂಥಾಲಯಕ್ಕೆ ಅಗತ್ಯವಿರುವ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಬೆಂಗಳೂರಿನ 'ಸಪ್ನಾ ಬುಕ್ ಹೌಸ್'ನ ವ್ಯವಸ್ಥಾಪಕರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಸರ್ವೋದಯ ಪ್ರೌಢಶಾಲೆ, ಕೋಲಾರದ ರಚನ/ದರ್ಶನ್ ಎಂದು ಭಾವಿಸಿಕೊಂಡು ನಿಮ್ಮ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಮತದಾರನ ಜಾಗೃತಿ ಮೂಡಿಸುವಲ್ಲಿ ವಿದ್ಯಾರ್ಥಿಗಳ ಪಾತ್ರ

**ಅಥವಾ**

* ಮೊಬೈಲ್ ಬಳಕೆಯಿಂದಾಗುವ ಲಾಭ ಮತ್ತು ಹಾನಿಗಳು

# ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆ, 2020–21

## ಮಾದರಿ ಪ್ರಶ್ನೆಪತ್ರಿಕೆ 10

ಸಮಯ: 3 ಗಂಟೆ **ಪ್ರಥಮ ಭಾಷೆ ಕನ್ನಡ (01 K)** ಅಂಕಗಳು : 100

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

1. ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದವಾಗಲಿ, ಪದಭಾಗವಾಗಲಿ, ಒಂದು ಪದ್ಯದ ಆದಿ, ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಬಂದರೆ ಅದು

   ಎ) ಅನುಪ್ರಾಸ ಬಿ) ಯಮಕ ಸಿ) ಚಿತ್ರಕವಿತ್ವ ಡಿ) ಪ್ರಾಸ

2. 'ನಡುರಾತ್ರಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

   ಎ) ಕರ್ಮಧಾರಯ ಬಿ) ತತ್ಪುರುಷ ಸಿ) ಅಂಶಿ ಡಿ) ದ್ವಿಗು

3. 'ನಕಲಿ' ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ.

   ಎ) ಅರಬ್ಬೀ ಬಿ) ಫಾರ್ಸಿ ಸಿ) ಉರ್ದು ಡಿ) ಗ್ರೀಕ್

4. 'ಹಿಮಾಲಯದತನಕ' ಈ ಪದದಲ್ಲಿರುವ ವ್ಯಾಕರಣಾಂಶ

   ಎ) ಕೃದಂತನಾಮ ಬಿ) ಕೃದಂತಾವ್ಯಯ ಸಿ) ತದ್ಧಿತಾಂತನಾಮ ಡಿ) ತದ್ಧಿತಾಂತಾವ್ಯಯ

5. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ

   ಎ) ಆವರಣ ಬಿ) ಅಲ್ಪವಿರಾಮ ಸಿ) ಅರ್ಧವಿರಾಮ ಡಿ) ಪೂರ್ಣವಿರಾಮ

6. ಒಂದು ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದರೆ ಅಂಥ ವಾಕ್ಯವನ್ನು ಹೀಗೆನ್ನುವರು.

   ಎ) ಸಾಮಾನ್ಯವಾಕ್ಯ ಬಿ) ಅಸಮಾನ್ಯವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಮಿಶ್ರವಾಕ್ಯ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿಸಿದ ಪದವನ್ನು ಬರೆಯಿರಿ:** **1 x 4 =4**

7. ಪರಶುರಾಮಂ : ಪ್ರಥಮ : : ದ್ರೋಣನಿಂ : ________
8. ನೆನಪು : ಕೃದಂತ ಭಾವನಾಮ : : ಮಾಡಲಿಕ್ಕೆ : ________
9. ಆಹಾ : ಭಾವಸೂಚಕಾವ್ಯಯ : : ಉಂ : ________
10. ಅನ್ವಯ : ವಂಶ : : ಕೈವಾರ : ________

**III ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

11. ಧರ್ಮಬುದ್ಧಿಯು ಬೆಳಗ್ಗೆ ಯಾರು ಯಾರಿಗೆ ಪೂಜೆ ಸಲ್ಲಿಸಿದನು?
12. ದುಷ್ಟಬುದ್ಧಿಯು ಹೊನ್ನಿನ ಕಳ್ಳತನದ ವಿಚಾರ ಮಾಡಲು ಯಾರಲ್ಲಿಗೆ ಬಂದನು?
13. ಅಶೋಕ ಪೈ ಅವರ ವೃತ್ತಿ ಯಾವುದಾಗಿತ್ತು?
14. ಶಾನುಭೋಗರು ಇರಸಾಲಿಗೆ ಎಲ್ಲಿಗೆ ಹೋಗಿದ್ದರು?
15. ಕಾಡುಮೇಡುಗಳ ಸ್ಥಿತಿ ಹೇಗಿದೆ?
16. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?
17. ಮಾನವೀಯ ಮೌಲ್ಯವನ್ನು ನುಂಗಿ ನೊಣೆಯುತ್ತಿರುವ ಅಂಶಗಳಾವುವು?

**IV ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10 x 2 = 20**

18. ರಾಹಿಲನು ಮುದುಕಿಯ ಕುಟುಂಬಕ್ಕೆ ಮಾಡಿದ ಸಹಾಯವನ್ನು ವಿವರಿಸಿ.
19. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
20. ವಿಶ್ವೇಶ್ವರಯ್ಯನವರು ಹೈದರಾಬಾದ್ ನಗರವನ್ನು ಹೇಗೆ ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರಿಸಿದರು?

21. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಧರ್ಮಾಧಿಕರಣರಲ್ಲಿಗೆ ಹೋಗಲು ಹೇಗೆ ಸಿದ್ಧರಾದರು?
22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
23. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ?
24. ವೈವಿಧ್ಯವೇ ಜೀವನದ ರಹಸ್ಯ- ಎಂಬುದನ್ನು ವಿವೇಕಾನಂದರು ಹೇಗೆ ತಿಳಿಸಿದ್ದಾರೆ?
25. ಭಗತ್‌ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಆ ಮಣ್ಣು' ಎಂಬುದನ್ನು ಹೇಗೆ ತಿಳಿಸಿದನು?
26. ಬೀಸುಕಲ್ಲಿನ ಒಗಟಿನ ವಿಶೇಷತೆಯನ್ನು ವಿವರಿಸಿ.
27. ವಸಂತನು ಯಾರು ಯಾರಿಗೆ ಮುಖ ತೋರಲಿಲ್ಲ?

**V ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಎ.ಎನ್.ಮೂರ್ತಿರಾವ್
29. ರನ್ನ

**VI ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ

**VII ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ. 1 x 3 = 3**

31. ಬಳಾರಿಯ ಮನೆಯಂ ಪರಕೆಯ ಕುಱಿಯಂ ಪುಗಿಸುವಂತೆ

**VIII ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1 x 3 = 3**

32. * ಕುಂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು
* ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ

**IX ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಯಾರಪ್ಪಾ ನೀನು? ನಮ್ಮ ಕಡೆಯವನು ತಾನೇ?"
34. "ಎನ್ನ ಬಗೆಗನಿವಾರ್ಯವೀ ಶೋಕದುಲ್ಕೆ"
35. "ನಾಳೆ ಮಾಡುವುದನ್ನು ಇಂದೇ ಮಾಡು"
36. "ಹೊಸ ಎಚ್ಚರದೊಳು ಬದುಕೋಣ."
37. "ರವಿಸುತನ ಕಿವಿಯಲಿ ಬಿತ್ತಿದನು ಭಯವ."
38. "ಹಸುರು ಹಸುರಿಳೆಯುಸಿರೂ"

**X ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4=4**

39. ಕೊಡಲಿ ಕೋರೆ ______________ ಸಿಕ್ಕದ್ದು ______________

______________ ______________

______________ **ಅಥವಾ** ______________

______________ ನಾನೆಷ್ಟಾ ______________ಜನಕಾ

**XI ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

40. **1 x 4=4**

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

**XII ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4=8**

41. ಕವಿ ಸಿದ್ಧಲಿಂಗಯ್ಯನವರು ಹೇಳಿದ ಮನೆ ಮಂಚಮ್ಮನ ಕತೆಯನ್ನು ಬರೆಯಿರಿ.

**ಅಥವಾ**

ಹಳಕಟ್ಟಿಯವರು ವಚನಕಾರರ ಅರಿವು ಮತ್ತು ಜ್ಞಾನದ ಬಗ್ಗೆ ಹೇಳಿರುವುದೇನು? ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?

**XIII ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

43. ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳವಳಿಯಿರಲಿಲ್ಲ. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜ ಕಾಲೇಜಿನಲ್ಲಿಯೂ ನನಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು. ವಿದ್ಯಾರ್ಥಿ ವೇತನದ ಮೊತ್ತ ತಿಂಗಳಿಗೆ ಹದಿನೆಂಟು ರುಪಾಯಿ. ವಿದ್ಯಾರ್ಥಿ ವೇತನ ಪಡೆಯುತ್ತಿದ್ದವರಿಗೆ ಕಾಲೇಜಿನ ಶುಲ್ಕವಿರಲಿಲ್ಲ. ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಣಕ್ಕಾಗಿ ನಮ್ಮ ಚಿಕ್ಕಪ್ಪನನ್ನು ಆಶ್ರಯಿಸುತ್ತಿರಲಿಲ್ಲ. ಅವರಿಗೆ ನನ್ನಿಂದ ತೊಂದರೆಯಾಗಬಾರದೆಂಬ ಉದ್ದೇಶದಿಂದ ವಿದ್ಯಾರ್ಥಿವೇತನದಿಂದಲೇ ನಮ್ಮ ಜೀವನ ನಿರ್ವಹಿಸುತ್ತಿದ್ದೆ. ಮೈಸೂರಿನಲ್ಲಿಯೂ ಅದೇ ರೀತಿ ವಿದ್ಯಾರ್ಥಿವೇತನದಿಂದಲೇ ನನ್ನ ಸಕಲ ಖರ್ಚುವೆಚ್ಚಗಳನ್ನು ಸರಿದೂಗಿಸುತ್ತಿದ್ದೆ. ವಿದ್ಯಾರ್ಥಿನಿಲಯದಲ್ಲಿ ಎರಡು ಹೊತ್ತು ಪುಷ್ಟಿಕರ ಆಹಾರ ಲಭಿಸುತ್ತಿತ್ತು ಎಂದು ಕಡಿದಾಳ್ ಮಂಜಪ್ಪನವರು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಂಡಿದ್ದಾರೆ.

**ಪ್ರಶ್ನೆಗಳು :**

43) ಅ) ಕಡಿದಾಳ್ ಮಂಜಪ್ಪನವರ ವಿದ್ಯಾರ್ಥಿಜೀವನ ಕಷ್ಟಕರವಾಗಿತ್ತು. ಹೇಗೆ? ವಿವರಿಸಿ.

ಆ) ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನ ದೇಗುಲದಂತಿತ್ತು. ಹೇಗೆ? ವಿವರಿಸಿ.

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x 5 = 5**

44. ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ಹೊಳೆನರಸೀಪುರದ ಕಿರಣ್/ಕವನ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಿಕ್ಷಕರ ದಿನಾಚರಣೆ'ಯನ್ನು ಕುರಿತು ಹಳೇಬೀಡಿನಲ್ಲಿ ವಾಸವಾಗಿರುವ ನಿಮ್ಮ ತಾಯಿಯವರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಸರ್ಕಾರಿ ಪ್ರೌಢಶಾಲೆ ರಾಮನಾಥಪುರದ ವಿದ್ಯಾರ್ಥಿ ವಿಜಯ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ರಾಷ್ಟ್ರೀಯ ವಿಜ್ಞಾನ ದಿನ'ದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿಜಯ ಕರ್ನಾಟಕ' ದಿನಪತ್ರಿಕೆಯ ಸಂಪಾದಕರಿಗೊಂದು ಪತ್ರ ಬರೆಯಿರಿ.

**XIV ಈ ಕೆಳಗಿನ ಯಾವುದಾದರೊಂದು ಪ್ರಬಂಧವನ್ನು 15 ವಾಕ್ಯಗಳಿಗೆ ಮೀರದಂತೆ ಬರೆಯಿರಿ: 1x5=5**

45. * ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮಗಳು

**ಅಥವಾ**

* ಮಳೆಕೊಯ್ಲು- ಅಗತ್ಯತೆ ಮತ್ತು ಅನುಕೂಲಗಳು


**ಸಂಪನ್ಮೂಲ ತಂಡ:**

**ರಮೇಶ್ ಕಣಕಟ್ಟೆ. ಸ.ಪ.ಪೂ.ಕಾಲೇಜು(ಪ್ರೌಢಶಾಲಾ ವಿಭಾಗ) ಬಾಣಾವರ. ಅರಸೀಕೆರೆ ತಾಲ್ಲೂಕು. 9481117477**

**ಶಾಂತಸಾಗರ ಕಲಕೇರಿ, ಸರ್ಕಾರಿ ಪ್ರೌಢಶಾಲೆ, ಯಲಗತವಳ್ಳಿ. ಅರಕಲಗೂಡು ತಾಲ್ಲೂಕು. 9591212061**

**ಸತೀಶ್.ಪಿ.ಕೆ. ಸರ್ಕಾರಿ ಪ್ರೌಢಶಾಲೆ, ನಿಟ್ಟೂರು. ಹಾಸನ ತಾಲ್ಲೂಕು. 9686031369**